14 January 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 75 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ವಿದ್ಯೆಗೂ, ಬುದ್ಧಿಗೂ ಅಜಗಜಾಂತರ ವ್ಯತ್ಯಾಸ! ವಿದ್ಯೆ ಕಲಿಯುವಿಕೆಯಿಂದ ಬಂದರೆ, ಬುದ್ಧಿ ಜನ್ಮದತ್ತವಾಗಿ ಬಂದಿರುತ್ತದೆ!

-ಸ್ನೇಹಾ ಆನಂದ್

ಒಂದೊಳ್ಳೆ ಮಾತು

ಕೆಲವೊಂದು ಸಮಯದಲ್ಲಿ ದುಡ್ಡಿನ ಆರ್ಭಟಕ್ಕೆ ಸತ್ಯ ಕೂಡ ಸದ್ದಿಲ್ಲದೇ ಸಂತೆಯೊಳಗೆ ಮರೆಯಾಗಿ ಬಿಡುತ್ತದೆ.

ಮೈಲಾರ ಸಾವಿತ್ರಿಬಾಯಿ

ರಾಗಾ ಜತೆ ಸಿದ್ದು, ಡಿಕೆಶಿ ಗೌಪ್ಯ ಚರ್ಚೆ

ಮೈಸೂರು ವಿಮಾನ ನಿಲ್ದಾಣದಲ್ಲಿ ಕುತೂಹಲ ಮೂಡಿಸಿದ ಪ್ರತ್ಯೇಕ ಮಾತುಕತೆ

ಮೈಸೂರು: ರಾಜ್ಯದಲ್ಲಿ ಬಗೆಹರಿಯದ ಅಧಿಕಾರ ಹಂಚಿಕೆ ವಿವಾದದ ಸಂದರ್ಭದಲ್ಲಿಯೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರತ್ಯೇಕವಾಗಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಸೃಷ್ಟಿಸಿದೆ.

ವಿಮಾನ ನಿಲ್ದಾಣದಲ್ಲಿಯೇ ರಾಹುಲ್ ಅವರು ಮೊದಲಿಗೆ ಇಬ್ಬರ ಜೊತೆಗೂ ಕೆಲ ನಿಮಿಷ ಒಟ್ಟಿಗೆ ಚರ್ಚಿಸಿದರು. ಆನಂತರ ಸಿಎಂ ಸಿದ್ದರಾಮಯ್ಯ ಅವರನ್ನು ಪಕ್ಕಕ್ಕೆ ಕರೆದು ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಮತ್ತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರೊಟ್ಟಿಗೂ ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಇದು ಅಧಿಕಾರ ಹಂಚಿಕೆಯ ಬಗ್ಗೆ ನಡೆದ ಮಾತುಕತೆ ಎಂದು ಅರ್ಥೈಸಲಾಗುತ್ತಿದೆ. ಅಂತಿಮ ನಿರ್ಧಾರ ಪುಟ 2ಕ್ಕೆ

ಸ್ಥಳೀಯ ಚುನಾವಣೆ ನಡೆಸಲು ಸರ್ಕಾರ ಸಿದ್ಧ: ಸಿದ್ದರಾಮಯ್ಯ

ಮೈಸೂರು: ರಾಜ್ಯದ ನಗರಪಾಲಿಕೆ, ನಗರ ಸಭೆ, ಪಟ್ಟಣ ಪಂಚಾಯಿತಿ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ರಾಜ್ಯ ಸರ್ಕಾರ ಸಿದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ರಾಹುಲ್ ಗಾಂಧಿ ಅವರಿಗೆ ಸ್ವಾಗತ ಪುಟ 2ಕ್ಕೆ

ಯಾವುದೇ ಗೊಂದಲವಿಲ್ಲ

ರಾಜ್ಯ ಸರ್ಕಾರದಲ್ಲಿ ಈಗಲೂ ಯಾವುದೇ ಗೊಂದಲ ಇಲ್ಲ. ಅದೆಲ್ಲ ಮಾಧ್ಯಮಗಳ ಸೃಷ್ಟಿ ಅಷ್ಟೇ. ಅಧಿಕಾರ ಹಸ್ತಾಂತರದ ಬಗ್ಗೆ ಏನಿದ್ದರೂ ನಾನು ಇಲ್ಲವೇ ಡಿ.ಕೆ.ಶಿವಕುಮಾರ್ ಮಾತನಾಡಬೇಕು. ನಾವು ಯಾವತ್ತೂ ಈ ಬಗ್ಗೆ ಮಾತನಾಡಿಲ್ಲ. ಶಾಸಕರು ಏನಾದರೂ ಮಾತನಾಡಿರಬಹುದು. ಅಂತಿಮವಾಗಿ ಪುಟ 2ಕ್ಕೆ

ಸಿಎಂ, ಡಿಸಿಎಂ ಸ್ವಾಗತ

ಮೈಸೂರು: ಇಲ್ಲಿನ ಮಂಡಕಳ್ಳಿಯ ವಿಮಾನ ನಿಲ್ದಾಣಕ್ಕೆ ಮಂಗಳವಾರ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತಿತರ ಕಾಂಗ್ರೆಸ್ ನಾಯಕರು ಸ್ವಾಗತಿಸಿದರು. ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರಿಗೆ ಮೈಸೂರು ಅರಮನೆ ಮಾದರಿಯನ್ನು ಉಡುಗೊರೆ ನೀಡಿದರು. ರಾಹುಲ್ ಗಾಂಧಿ ಅವರು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಗೂಡ್ಲೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದಾರೆ. ಮಾರ್ಗಮಧ್ಯೆ ಮೈಸೂರು ನಿಲ್ದಾಣದಲ್ಲಿ ಇಳಿದಿದ್ದರು. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್, ಕೆ.ವೆಂಕಟೇಶ್ ಇದ್ದರು.



ಸುಪ್ರೀಂ ಆದೇಶದಂತೆ ನಿಗದಿತ ಅವಧಿಯಲ್ಲಿ ಚುನಾವಣೆ: ಡಿಕೆಶಿ

ಬೆಂಗಳೂರು: ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ನಿಗದಿತ ದಿನದ ಒಳಗೆ ಜಿಬಿಎ ಪಾಲಿಕೆಗಳ ಚುನಾವಣೆ ನಡೆಸಲಾಗುವುದು. ಈ ಸಂಬಂಧ ರಾಜ್ಯ ಚುನಾವಣಾ ಆಯೋಗಕ್ಕೆ ಅಗತ್ಯ ನಿರ್ದೇಶನ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅರಮನೆ ಮೈದಾನದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯ ಚುನಾವಣಾ ಆಯೋಗವು ನ್ಯಾಯಾಲಯದ ಮುಂದೆ ಚುನಾವಣೆ ನಡೆಸುವ ಬಗ್ಗೆ ಪ್ರಮಾಣಪತ್ರ ಸಲ್ಲಿಸಿದೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಸಹ ನಿಗದಿತ ಅವಧಿ ಒಳಗೆ ನಡೆಯಬೇಕು ಎಂದು ತಿಳಿಸಿದರು.

ತಾಂತ್ರಿಕ ಆಕ್ಷೇಪಣೆಗಳ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, ಕೆಲವರು ಆಕ್ಷೇಪಣೆ ಸಲ್ಲಿ ಸುತ್ತಾರೆ. ಅದಕ್ಕೆ ಸಮಿತಿ ರಚಿಸಲಾಗಿದ್ದು, ಸಮಿತಿ ತೀರ್ಮಾನ ಮಾಡ ಲಿದೆ ಮೀಸಲಾತಿ ವಿಚಾರ ವಾಗಿ ಮಹಿಳೆಯ ರಿಗೆ ಕಡಿಮೆ ಯಾ ಗಿದೆ ಎಂಬ ಮಾತು ಕೇಳಿಬಂದಿವೆ. ಇದನ್ನು ನಾನು ಗಮನಿಸಿಲ್ಲ. ತಪ್ಪಾಗಿದ್ದರೆ ಸರಿಪಡಿಸಲು ಸೂಚಿಸಲಾಗುವುದು. ನಾವು ಯಾವುದರಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ ಎಂದರು. ಚುನಾವಣೆ ನಡೆಸಲು ನ್ಯಾಯಾಲಯದ ಬಳಿ ಹೆಚ್ಚುವರಿ ಸಮಯ ಕೇಳುತ್ತೀರಾ ಎಂಬ ಪ್ರಶ್ನೆಗೆ ಯಾವುದೇ ಕಾಲಾವಕಾಶ ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚುನಾವಣೆ ನಿಮ್ಮ ಪಾಲಿಗೆ ಸವಾಲಿನದ್ದಾಗಿದೆಯಲ್ಲವೇ? ಎಂಬ ಪ್ರಶ್ನೆಗೆ, ಚುನಾವಣೆ ನಡೆಸುವುದು ನಮ್ಮ ಕರ್ತವ್ಯ. ಕಾರ್ಯಕರ್ತರಿಗೆ ಅಧಿಕಾರ ಕೊಡುವುದು, ಹೊಸ ನಾಯಕರನ್ನು ತಯಾರು ಮಾಡುತ್ತಿದ್ದೇವೆ. ನಾವು ಮಾಡುತ್ತಿರುವ ಕೆಲಸಕ್ಕೆ ಜನ ಬೆಂಬಲ ನೀಡುವ ವಿಶ್ವಾಸವಿದೆ. ನಾವು ಐದೂ ಪಾಲಿಕೆಗಳಲ್ಲೂ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಫ್ರೆಂಡ್ಲಿ ಫೈಟ್ ವಿಚಾರವಾಗಿ ಕೇಳಿದಾಗ, ಅವರು ಏನಾ ದರೂ ಮಾಡಿಕೊಳ್ಳಲಿ. ಜೊತೆಯಾಗಿ ಯಾದರೂ ಚುನಾವಣೆ ಮಾಡಲಿ, ಬೇರೆಯಾಗಿ ಬೇಕಾದರೂ ಮಾಡಲಿ. ಅವರು ಸಂಸತ್ ಚುನಾವಣೆಯಲ್ಲಿ ಒಟ್ಟಿಗೆ ಚುನಾ ವಣೆ ಎದುರಿಸಿದಂತೆ ವಿಧಾನಸಭೆ ಹಾಗೂ

ಭ್ರಷ್ಟರ ತನಿಖೆಗೆ ಪೂರ್ವಾನುಮತಿ: ಸುಪ್ರೀಂ ಕೋರ್ಟ್ ವಿಭಿನ್ನ ತೀರ್ಪು

ಭಷ್ಟರ ರಕ್ಷಣೆಗಿರುವ ಸೆ.17ಎ ರದ್ದುಗೊಳಿಸಲು ನ್ಯಾ.ನಾಗರತ್ನ ಆದೇಶ

ನವದೆಹಲಿ: ಭ್ರಷ್ಟಾಚಾರ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳನ್ನು ತನಿಖೆ ಮಾಡುವ ಮೊದಲು ಸರ್ಕಾರದ ಪೂರ್ವಾನುಮತಿ ಕಡ್ಡಾಯ ಮಾಡುರುವ ಭ್ರಷ್ಟಾಚಾರ ವಿರೋಧಿ ಕಾನೂನಿನ 2018ರ ನಿಬಂಧನೆ ಸಿಂಧುತ್ವದ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ವಿಭಿನ್ನ ತೀರ್ಪು ಪ್ರಕಟಿಸಿದೆ.

ನ್ಯಾಯಮೂರ್ತಿ ಬಿ.ವಿ ನಾಗರತ್ನ ಮತ್ತು ನ್ಯಾಯಮೂರ್ತಿ ಕೆ.ವಿ ವಿಶ್ವನಾಥನ್ ನೇತೃತ್ವದ ಸುಪ್ರೀಂ ಕೋರ್ಟ್ನ ದ್ವಿಸದಸ್ಯ ಪೀಠ ವಿಭಿನ್ನ ತೀರ್ಪು ನೀಡಿದೆ. 2018ರಲ್ಲಿ ಭ್ರಷ್ಟಾಚಾರ ತಡೆ(ಪಿಸಿ) ಕಾಯ್ದೆ, 1988ರಲ್ಲಿ ಪರಿಚಯಿಸಲಾದ ತಿದ್ದುಪಡಿಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಆಗಸ್ಟ್ 6, 2025 ರಂದು ತೀರ್ಪನ್ನು ಕಾಯ್ದಿರಿಸಿತ್ತು. ನ್ಯಾಯಮೂರ್ತಿ ವಿಶ್ವನಾಥನ್ ಅವರು, ಕಾಯ್ದೆಯ ಸೆಕ್ಷನ್ 17ಎ ಅನ್ನು ಎತ್ತಿಹಿಡಿದರು. ನ್ಯಾಯಮೂರ್ತಿ ನಾಗರತ್ನ ಅವರು ಈ ನಿಬಂಧನೆ ರದ್ದುಗೊಳಿಸಲು ಅರ್ಹ ಎಂದು ತೀರ್ಪು ನೀಡಿದ್ದಾರೆ. ಪುಟ 2ಕ್ಕೆ

ಎಚ್‌ಡಿಕೆ ಎರಡು ಬಾರಿ ಲೀಸ್ ಸಿಎಂ!

ಒಮ್ಮೆಯೂ ಬಹುಮತದಿಂದ ಸಿಎಂ ಆಗಲಿಲ್ಲ: ಶಿವಲಿಂಗೇಗೌಡ ವಾಗ್ದಾಳಿ

ಹಾಸನ: ಎಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಲೀಸ್ ಬೇಸ್‌ನಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಅವರು ಸ್ವಂತ ಬಲದಿಂದ ಒಮ್ಮೆಯೂ ಸಿಎಂ ಆಗಲಿಲ್ಲ ಎಂದು ಶಾಸಕ ಶಿವಲಿಂಗೇಗೌಡ ಕಿಡಿಕಾರಿದರು.

ಸಿದ್ದರಾಮಯ್ಯ ಲೀಸ್ ಬೇಸ್ ಸಿಎಂ ಎಂಬ ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯೆ ನೀಡಿದ ಅವರು, ಸಿದ್ದರಾಮಯ್ಯ ಲೀಸ್ ಬೇಸ್ ಸಿಎಂ ಆದರೆ ಕುಮಾರಸ್ವಾಮಿ ಏನು? ಕುಮಾರಸ್ವಾಮಿ 2 ಬಾರಿ ಸಿಎಂ ಆಗಿದ್ದರು. ಅವರಿಗೆ ಜನರು ಆಶೀರ್ವಾದ ಮಾಡಿ ಅಧಿಕಾರ ಕೊಟ್ಟಿದ್ದರೇ? ಅವರು ಲೀಸ್ ಬೇಸ್ ಮೇಲೆ ಆಗಿದ್ದರು ತಾನೇ? ಎಂದು ವಾಗ್ದಾಳಿ ನಡೆಸಿದರು.

ಸುಮ್ಮನೆ ಟೀಕೆ ಮಾಡಲು ಮಾತಾನಾಡುವುದು ಬೇಡ. ಕುಮಾರಸ್ವಾಮಿ ಯಾವತ್ತು 113 ಸ್ಥಾನ ತೆಗೆದುಕೊಂಡು ಸಿಎಂ ಆಗಿಲ್ಲ. 42 ಸ್ಥಾನ ತೆಗೆದುಕೊಂಡು ಸಿಎಂ ಆದವರು. ಸಿದ್ದರಾಮಯ್ಯ ಆದರೂ 136 ಸ್ಥಾನ ಗೆದ್ದು ಸಿಎಂ ಆಗಿದ್ದಾರೆ. ರಾಜಕೀಯಕ್ಕಾಗಿ ಮಾತನಾಡುವುದು ಕುಮಾರಸ್ವಾಮಿ ಅವರ ಘನತೆಗೆ ಸರಿಯಲ್ಲ ಎಂದು ಕಿಡಿಕಾರಿದರು.

ಕುಮಾರಸ್ವಾಮಿ ರಾಜ್ಯ ರಾಜಕೀಯಕ್ಕೆ ಬರುವುದಾದರೆ ಸ್ವಾಗತ. ಮಾಜಿ ಸಚಿವ ರೇವಣ್ಣ ನನ್ನ ಕ್ಷೇತ್ರಕ್ಕೆ ಬರುವುದಾದರೆ ಸ್ವಾಗತ. ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು ಎಂದರು.

ನಾಯಕತ್ವ ಗೊಂದಲ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾಯಕತ್ವ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ. ಹೈಕಮಾಂಡ್ ಈ ವಿಚಾರದ ಬಗ್ಗೆ ತೀರ್ಮಾನ ಮಾಡಲಿದೆ. ಯಾರೋ ಎರಡು ಜನ ಶಾಸಕರು ಮಾತನಾಡುತ್ತಾರೆ ಎಂದು ಮಾತಾಡ ಬೇಡಿ. ನೀವು ಅದರ ಬಗ್ಗೆ ಮಾತಾಡೋದು ಬಿಡಿ. ನಾಯಕತ್ವದ ಬಗ್ಗೆ ಮಾಧ್ಯಮಗಳು ಮಾತನಾಡು ವುದು ನಿಲ್ಲಿಸಿ ಎಂದರು.

ನರೇಗಾ ಯೋಜನೆ ಅನ್ಯಾಯದ ಬಗ್ಗೆ ಹಳ್ಳಿ ಹಳ್ಳಿಯಲ್ಲಿ ಪಾದಯಾತ್ರೆ ಮಾಡುತ್ತೇವೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಬಿಚ್ಚಿ ಹೇಳುತ್ತೇವೆ. ಗ್ರಾಮ ಸ್ವರಾಜ್ಯ ಮಾಡಲು ಮನಮೋಹನ್ ಸಿಂಗ್ ನರೇಗಾ ಜಾರಿ ಮಾಡಿ ದರು. ಈಗಿನ ಬಿಜೆಪಿ ಅವರು ಈ ಯೋಜನೆಗೆ ಚಪ್ಪಡಿ ಎಳೆದಿದ್ದಾರೆ. ಮೊದಲು ಅವರೇ ಪುಟ 2ಕ್ಕೆ

ನಾನು ಸಚಿವ ಸ್ಥಾನದ ಆಕಾಂಕ್ಷಿ

ನಾನು ಸಚಿವ ಸ್ಥಾನದ ಆಕಾಂಕ್ಷಿ. ನನಗೆ ಸಚಿವ ಸ್ಥಾನ ಸಿಗಲಿದೆ ಎಂದು ಶಾಸಕ ಶಿವಲಿಂಗೇಗೌಡ ತಿಳಿಸಿದರು. ನಾನು ಯಾವಾಗ ಮಂತ್ರಿ ಆಗಬೇಕು ಎಂದು ಹಣೆಬರಹ ತೀರ್ಮಾನ ಮಾಡುತ್ತದೆ. ಹಣೆಯಲ್ಲಿ ಬರೆದಿದ್ದರೆ ಸಚಿವ ಆಗುತ್ತೇನೆ. ಇಲ್ಲ ಅಂದರೆ ಇಲ್ಲ ಎಂದರು.

ನಾಯಕತ್ವ ಗೊಂದಲಕ್ಕೆ 'ಹೈ ಬ್ರೇಕ್' ಹಾಕಲಿ

ಇಲ್ಲದಿದ್ದರೆ ಆಡಳಿತದ ಮೇಲೆ ದುಷ್ಪಾರಿಣಾಮ: ಕೆ.ಎನ್.ರಾಜಣ್ಣ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಅಧಿಕಾರ ಹಸ್ತಾಂತರ, ನಾಯಕತ್ವದ ಬಗ್ಗೆ ಇರೋ ಗೊಂದಲವನ್ನ ರಾಹುಲ್ ಗಾಂಧಿ ಇತ್ಯರ್ಥ ಮಾಡಬೇಕು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಆಗ್ರಹಿಸಿದ್ದಾರೆ.

ರಾಹುಲ್ ಗಾಂಧಿ ಅವರನ್ನು ಸಿಎಂ–ಡಿಸಿಎಂ ಭೇಟಿ ಮಾಡುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸಿಎಂ–ಡಿಸಿಎಂ ಭೇಟಿಯ ಸಂದರ್ಭದಲ್ಲಿ ಪರಿಹಾರ ಸಿಗಬೇಕು. ನಾಯಕತ್ವ ಬದಲಾವಣೆ ವಿಚಾರದಲ್ಲಿ ಎದ್ದಿರುವ ಚರ್ಚೆಗೆ ಹೈಕಮಾಂಡ್ ಸ್ಪಷ್ಟನೆ ಕೊಡಬೇಕು. ರಾಹುಲ್ ಗಾಂಧಿ ಭೇಟಿ ಮಾಡಿದ ಸಂದರ್ಭದಲ್ಲಿ ಇದಕ್ಕೆ ಉತ್ತರ ಸಿಗುವ ನಿರೀಕ್ಷೆ ಇದೆ. ಗೊಂದಲ ಪರಿಹಾರ ಮಾಡದಿದ್ದರೆ ಆಡಳಿತದ ಮೇಲೆ ದುಷ್ಪಾರಿಣಾಮ ಆಗಲಿದೆ. ಅನಗತ್ಯವಾಗಿರುವ ಅಭಿಪ್ರಾಯಗಳು ಕೂಡ ವ್ಯಕ್ತವಾಗುತ್ತದೆ. ಪರ ವಿರೋಧ ಅಭಿಪ್ರಾಯಗಳು ಕೂಡ ಬರಲಿದೆ. ಇದಕ್ಕೆ ಬ್ರೇಕ್ ಹಾಕುವ ಕೆಲಸವನ್ನು ಹೈಕಮಾಂಡ್ ಮಾಡಬೇಕು ಎಂದರು.

ಈ ಹಿಂದೆಯೇ ನಾನು ಇದನ್ನು ಒತ್ತಾಯ ಮಾಡಿದ್ದೆ. ಈಗಲೂ ಹೈಕಮಾಂಡ್‌ಗೆ ಒತ್ತಾಯ ಮಾಡುತ್ತೇನೆ. ಗೊಂದಲ ಪರಿಹಾರ ಆಗದಿದ್ದರೆ ಶಾಸಕರಲ್ಲಿ ಗೊಂದಲ ಇರುತ್ತದೆ. ಯಾರ್ ಸಿಎಂ ಆಗ್ತಾರೆ? ನಮ್ಮದೇನು ಅಂತ ಗೊಂದಲ ಇರುತ್ತದೆ. ಜೊತೆಗೆ ಬೆಂಗಳೂರು ಚುನಾವಣೆ ನಡೆಸುವ ಬಗ್ಗೆ ತೀರ್ಮಾನ ಆಗಬೇಕಿದೆ. ಕಾರ್ಪೊರೇಷನ್ ಚುನಾವಣೆ ಜೊತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಆಗಬೇಕು. ಸ್ಥಳೀಯ ಸಂಸ್ಥೆ ಚುನಾವಣೆ ಆಗದಿದ್ದರೆ ಕೇಂದ್ರದಿಂದ ಬರುವ ಅನುದಾನಕ್ಕೆ ತೊಂದರೆಯಾಗಲಿದೆ ಎಂದು ತಿಳಿಸಿದರು.

ಜನವರಿ 16ಕ್ಕೆ ಸಿಹಿ ಸುದ್ದಿ ಬರಲಿದೆ ಎಂಬ ಡಿಕೆಶಿ ಬಣದ ನಾಯಕರ ಹೇಳಿಕೆ ವಿಚಾರಕ್ಕೆ ತಿರುಗೇಟು ನೀಡಿದ ಅವರು, ಸಿಹಿ ಸುದ್ದಿ ಆದ್ರೂ ಬರಲಿ ಏನಾದರೂ ಬರಲಿ. ಒಂದು ಕಡೆ ಸಿಎಂ ಬದಲಾವಣೆ ಅನ್ನುವಂತ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಮಾತು ಕೊಟ್ಟಿದ್ದಾರೆ ಅಂತಾನೂ ಹೇಳುತ್ತಿದ್ದಾರೆ. ಏನೇ ಆದರೂ ಹೈಕಮಾಂಡ್ ಸ್ಪಷ್ಟನೆ ಕೊಡಲಿ. ಡಿಕೆಶಿಗೆ ಅವಕಾಶ ಸಿಕ್ಕರೆ ಅದು ಹೈಕಮಾಂಡ್ ತೀರ್ಮಾನ ಆಗಲಿ ಎಂದು ತಿಳಿಸಿದರು.

ಆನೆ ದಾಳಿಗೆ ಮಹಿಳೆ ಬಲಿ

ಹಾಸನ: ಜಿಲ್ಲೆಯಲ್ಲಿ ಮಾನವ ಮತ್ತು ಕಾಡಾನೆ ಸಂಘರ್ಷ ಮುಂದುವರೆದಿದೆ. ಕಾಡಾನೆ ದಾಳಿಯಿಂದ ಮತ್ತೊಬ್ಬರು ಮಹಿಳೆ ಪ್ರಾಣ ಕಳೆದುಕೊಂಡಿದ್ದಾರೆ.

ಸಕಲೇಶಪುರ ತಾಲ್ಲೂಕಿನ ಮೋಗಲಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಕಾಡಾನೆ ದಾಳಿಗೆ ಕಾರ್ಮಿಕ ಮಹಿಳೆ ಬಲಿಯಾಗಿದ್ದಾರೆ. ಮೃತ ಮಹಿಳೆಯನ್ನು ಶೋಭಾ(40) ಎಂದು ಗುರುತಿಸಲಾಗಿದೆ. ಇಂದು ಬೆಳಿಗ್ಗೆ ಕಾಫಿ ತೋಟದಲ್ಲಿ ಸುಣ್ಣ ಹಚ್ಚುವ ಕೆಲಸಕ್ಕೆ ಶೋಭ ತೆರಳಿದ್ದರು. ಈ ವೇಳೆ ಏಕಾಏಕಿ ದಾಳಿ ನಡೆಸಿದ ಕಾಡಾನೆ, ಮಹಿಳೆಯನ್ನು ತುಳಿದು ಕೊಂದಿದೆ. ಘಟನೆಯ ಬಳಿಕ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾಡಾನೆ ದಾಳಿಯಿಂದ ಮಹಿಳೆ ಮೃತಪಟ್ಟಿದ್ದಕ್ಕೆ ಆಕ್ರೋಶಗೊಂಡ ಗ್ರಾಮಸ್ಥರು, ಮೃತದೇಹವನ್ನು ಸ್ಥಳದಲ್ಲೇ ಇಟ್ಟು ಧರಣಿ ನಡೆಸಿದರು. ಅರಣ್ಯಾಧಿಕಾರಿಗಳ ನಿರ್ಲಕ್ಷ್ಯವೇ ಈ ದುರ್ಘಟನೆಗೆ ಕಾರಣ ಎಂದು ಆರೋಪಿಸಿದರು. ಕಾಡಾನೆಗಳ ಸಂಚಾರದ ಬಗ್ಗೆ ಮುಂಚಿತವಾಗಿಯೇ ಜನರಿಗೆ ಮಾಹಿತಿ ನೀಡುತ್ತಿಲ್ಲ ಹಾಗೂ ರೆಡಿಯೋ ಕಾಲರ್ ಅಳವಡಿಸದೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ನರೇಗಾ ಬಚಾವೊ ಜನಾಂದೋಲನ

ಬೆಂಗಳೂರು: ಯುಪಿಎ ಸರ್ಕಾರ ಜಾರಿಗೆ ತಂದಿದ್ದ ನರೇಗಾ ಕಾಯ್ದೆ ಮರು ಜಾರಿ ಆಗುವವರೆಗೆ ಹೋರಾಟ ಮುಂದುವರಿಸಲಾಗುವುದು. ನರೇಗಾ ಬಚಾವೊ ಅಭಿಯಾನವನ್ನು ಜನಾಂದೋಲನವಾಗಿ ಪರಿವರ್ತಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಿಸಿದರು.

ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ ನರೇಗಾ ಬಚಾವೊ ಸಂಗ್ರಾಮ ಕಾರ್ಯಕ್ರಮದ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಸಿದ್ಧರಾಮಯ್ಯ ಅವರು, ನರೇಗಾ ಕಾಯ್ದೆಯ ಬದಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹೊಸತಾಗಿ ಜಾರಿಗೆ ತಂದಿರುವ ವಿಬಿ ಜಿ ರಾಮ್ ಜಿ ಕಾಯ್ದೆ ರದ್ದು ಆಗಲೇಬೇಕು

ಮೊದಲ ಪುಟದಿಂದ

ರಾಗಾ ಜತೆ ಸಿದ್ದು, ಡಿಕೆಶಿ ಗೌಪ್ಯ ಚರ್ಚೆ

ಕೈಗೊಳ್ಳುವವರೆಗೆ ಸಮಾಧಾನದಿಂದ ಇರುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ರಾಹುಲ್ ಸೂಚಿಸಿದ್ದಾರೆ ಎನ್ನಲಾಗಿದೆ.

ಆದರೆ, ರಾಜ್ಯ ರಾಜಕಾರಣದಲ್ಲಿನ ಅಧಿಕಾರ ಹಂಚಿಕೆ, ಸಚಿವ ಸಂಪುಟ ವಿಸ್ತರಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾಂಗ್ರೆಸ್ ಭವನ ಉದ್ಘಾಟನೆ ಸೇರಿದಂತೆ ಹಲವು ವಿಚಾರಗಳು ಮುನ್ನಲೆಯಲ್ಲಿರುವ ಹಿನ್ನೆಲೆಯಲ್ಲಿ ಯಾವ ವಿಚಾರ ಚರ್ಚೆ ಆಗಿದೆ ಎಂಬುದು ಅಂತಿಮವಾಗಿ ಬಹಿರಂಗಗೊಂಡಿಲ್ಲ.

ದೆಹಲಿಗೆ ವಾಪಸ್: ಬಳಿಕ ರಾಹುಲ್ ಗಾಂಧಿ ಹೆಲಿಕಾಪ್ಟರ್ ಮೂಲಕ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಗೂಡ್ಲೂರಿಗೆ ತೆರಳಿದರು. ಸಂಜೆ ಅದೇ ಹೆಲಿಕಾಪ್ಟರ್‌ನಲ್ಲಿ ಮೈಸೂರು ವಿಮಾನ ನಿಲ್ದಾಣಕ್ಕೆ ವಾಪಸಾಗಿ ದೆಹಲಿಗೆ ಪ್ರಯಾಣ ಬೆಳೆಸಿದರು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆಶಿ ಸಂಜೆ ರಾಹುಲ್‌ರನ್ನು ಬೀಳ್ಕೊಟ್ಟ ಬಳಿಕ ಒಂದೇ ವಿಮಾನದಲ್ಲಿ ಬೆಂಗಳೂರಿಗೆ ವಾಪಸ್ ಆದರು. ರಾಹುಲ್ ಗಾಂಧಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬಂದಿದ್ದು, ಅವರನ್ನು ನಾವೆಲ್ಲ ಒಟ್ಟಾಗಿ ಭೇಟಿಯಾಗಿದ್ದೇವೆ. ಅವರೊಂದಿಗೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ ಎಂದು ಸಿದ್ದರಾಮಯ್ಯ ಆನಂತರ ಪತ್ರಕರ್ತರಿಗೆ ತಿಳಿಸಿದರು

ಯಾವುದೇ ಗೊಂದಲವಿಲ್ಲ

ನಾವಿಬ್ಬರೂ ಹೈಕಮಾಂಡ್ ತೀರ್ಮಾನದಂತೆ ನಡೆಯುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ರಾಹುಲ್ ಗಾಂಧಿ ಅವರು ಗೂಡ್ಲೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬಂದಿದ್ದು, ಅವರನ್ನು ನಾವೆಲ್ಲ ಇಲ್ಲಿನ ವಿಮಾನನಿಲ್ದಾಣದಲ್ಲಿ ಭೇಟಿಯಾಗಿದ್ದೇವೆ. ಆದರೆ ಯಾವುದೇ ಮಾತುಕತೆ ನಡೆದಿಲ್ಲ. ಸಂಪುಟ ಪುನರ್ ರಚನೆ ಬಗ್ಗೆ ಸದ್ಯ ಯಾವುದೇ ಚರ್ಚೆ ನಡೆದಿಲ್ಲ. ದೆಹಲಿಗೂ ಹೋಗುತ್ತಿಲ್ಲ ನಾನು ಸದ್ಯಕ್ಕೆ ದೆಹಲಿಗೂ ಹೋಗುತ್ತಿಲ್ಲ ಎಂದು ಹೇಳಿದರು. ಮಾರ್ಚ್ ಮೊದಲ ವಾರದಲ್ಲಿ ರಾಜ್ಯ ಬಜೆಟ್ ಮಂಡಿಸಲಿದ್ದೇನೆ ಎಂದು ಮುಖ್ಯಮಂತ್ರಿ ಹೇಳಿದರು. ಹಾವೇರಿಯಲ್ಲಿ ಫೆಬ್ರುವರಿ 13ರಂದು ಸರ್ಕಾರದ ಸಾಧನೆಗಳ ಸಮಾವೇಶ ನಡೆಸಲು ಯೋಜಿಸಿದ್ದೇವೆ ಎಂದು ಸಿಎಂ ತಿಳಿಸಿದರು.\

ಸುಪ್ರೀಂ ಕೋರ್ಟ್ ವಿಭಿನ್ನ ತೀರ್ಪು

ನ್ಯಾಯಮೂರ್ತಿ ನಾಗರತ್ನ ಅವರು ತಮ್ಮ ಆದೇಶದಲ್ಲಿ, ಈ ನಿಬಂಧನೆಯು ಭ್ರಷ್ಟರನ್ನು ರಕ್ಷಿಸುವ ಪ್ರಯತ್ನವಾಗಿದೆ. ಸೆಕ್ಷನ್ 17ಂ ಅಸಂವಿಧಾನಿಕವಾಗಿದೆ. ಅದನ್ನು ರದ್ದುಗೊಳಿಸಬೇಕು. ಯಾವುದೇ ಪೂರ್ವಾನುಮತಿ ಪಡೆಯುವ ಅಗತ್ಯವಿಲ್ಲ. ಈ ನಿಬಂಧನೆಯು ವಿನೀತ್ ನಾರಾಯಣ್ ಮತ್ತು ಸುಬ್ರಮಣಿಯನ್ ಸ್ವಾಮಿ ಅವರ ತೀರ್ಪುಗಳಲ್ಲಿ ಹಿಂದೆ ರದ್ದುಗೊಳಿಸಿರುವುದನ್ನು ನ್ಯಾಯಮೂರ್ತಿ ನಾಗರತ್ನ ಉಲ್ಲೇಖಿಸಿದ್ದಾರೆ.

ಸುಪ್ರೀಂ ಕೋರ್ಟ್ ಆಕ್ರೋಶ

ಮೇಲೆ ಭಾರೀ ಪರಿಹಾರ ವಿಧಿಸಬಹುದು. ಮಕ್ಕಳು ಮತ್ತು ಹಿರಿಯ ನಾಗರಿಕರ ಮೇಲಿನ ದಾಳಿ, ಗಾಯ ಅಥವಾ ಸಾವಿಗೆ ರಾಜ್ಯಗಳು ಜವಾಬ್ದಾರಿಯಾಗಬೇಕು ಎಂದು ನ್ಯಾಯಮೂರ್ತಿ ವಿಕ್ರಮ್ ನಾಥ್ ಆದೇಶಿಸಿದ್ದಾರೆ. ನಾವು ಶಾಸನಬದ್ಧ ನಿಬಂಧನೆ ಅನುಷ್ಠಾನವನ್ನು ಬಯಸುತ್ತೇವೆ. ಅದನ್ನು ಮಾಡಲು ನಮಗೆ ಅವಕಾಶ ನೀಡಿ. ಪ್ರತಿ ನಾಯಿ ಕಡಿತಕ್ಕೆ, ಪ್ರತಿ ಸಾವಿಗೆ, ಅಗತ್ಯ ವ್ಯವಸ್ಥೆಗಳನ್ನು ಮಾಡದಿದ್ದಕ್ಕಾಗಿ ನಾವು ರಾಜ್ಯಗಳಿಗೆ ಭಾರೀ ಪರಿಹಾರವನ್ನು ನಿಗದಿಪಡಿಸುವ ಸಾಧ್ಯತೆಯಿದೆ ಎಂದು ಪೀಠ ಹೇಳಿದೆ.

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.

(Ph. No: 0821-2979772 E-mail:khsdrp.divmys@gmail.com)

ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–1/ಟೆಂಡರ್–20–2ನೇ ಕರೆ/ Ch.Nagar-Deposit/2025–26 ದಿ: 07.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ–2ನೇ ಕರೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ದುರಸ್ಥಿ ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ನಾಲ್ಕನೇ ದರ್ಜೆ ಮತ್ತು ಮೇಲ್ಮಟ್ಟ ಅರ್ಹ ಸಿವಿಲ್ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗೂ CAT-II(A) ವರ್ಗದ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.7.00 ಲಕ್ಷಗಳಿಂದ ಗರಿಷ್ಠ ರೂ.25.00 ಲಕ್ಷಗಳಾಗಿರುತ್ತದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:16.01.2026 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 17.01.2026 ರಂದು 16.30 ಗಂಟೆಗೆ.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https:// kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು

DIPR/DDMYS/1492/KSMCA/846/2025-26

ಕುವೆಂಪು ಪಂಚಶೀಲ ತತ್ವಗಳು ಎಲ್ಲ ಕಾಲಕ್ಕೂ ಬೇಕು: ಕೆ.ಪಿ. ಮೃತ್ಯುಂಜಯ

ಎಂ.ಆರ್.ಎಂ. ಸಾಹಿತ್ಯ ಹಾಗೂ ಪ್ರಕಾಶನ ಪ್ರಶಸ್ತಿ ಪ್ರದಾನ, ಕೃತಿಗಳ ಲೋಕಾರ್ಪಣೆ

ಮೈಸೂರು: ರಾಷ್ಟ್ರಕವಿ ಕುವೆಂಪು ಅವರ ಪಂಚಶೀಲ ತತ್ವಗಳಾದ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿಯನ್ನು ಎಲ್ಲ ಕಾಲಕ್ಕೂ ನಮ್ಮದಾಗಿಸಿಕೊಳ್ಳಬೇಕು ಎಂದು ಕವಿ ಕೆ.ಪಿ.ಮೃತ್ಯುಂಜಯ ತಿಳಿಸಿದರು.

ಮಂಡ್ಯದ ಎಂ.ಆರ್.ಎಂ. ಪ್ರಕಾಶನವು ತಿ.ನರಸೀಪುರ ತಾಲ್ಲೂಕಿನ ಯಾಚೇನಹಳ್ಳಿಯ ಶ್ರೀರಾಮ ಕೃಷ್ಣ ಸೇವಾ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಪ್ರಥಮ ವಾರ್ಷಿಕೋತ್ಸವ, ಅವಧೂತ ಮಾದಪ್ಪ ಹಾಗೂ ದಿ ಕಾಪಿ ಕೃತಿಗಳ ಬಿಡುಗಡೆ, ರಾಷ್ಟ್ರೀಯ ಯುವ ದಿನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೊಡಮಾಡಿದ ಎಂ.ಆರ್.ಎಂ. ಸಾಹಿತ್ಯ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು. ಕುವೆಂಪು ಹಾಗೂ ಡಾ. ರಾಜ್ಕುಮಾರ್ ನಾಡು ಕಂಡ ಶ್ರೇಷ್ಠ ಸಾಂಸ್ಕೃತಿಕ ನಾಯಕರು ಎಂದು ಬಣ್ಣಿಸಿದ ಅವರು, ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದಲ್ಲಿರುವ ಅಸ್ಪೃಶ್ಯತೆ, ಜಾತೀಯತೆ ಹಾಗೂ ಬಡತನವನ್ನು ಆಮೂಲಾಗ್ರವಾಗಿ ನಿರ್ಮೂಲನೆ ಮಾಡಬೇಕೆಂದು ಶ್ರಮಿಸಿದ ದೊಡ್ಡ ಬಂಡುಕೋರ. ಧರ್ಮ ಸಹಿಷ್ಣುತೆ ಸಾರಿದ ಶ್ರೇಷ್ಠ ಸಂತನನ್ನು ಹಿಂದೂತ್ವ ವಾದಕ್ಕೆ ಬಳಸಬಾರದು. ಗೌತಮ ಬುದ್ಧ ಸ್ವಾಮಿ ವಿವೇಕಾನಂದರಿಗೆ ಆದರ್ಶವಾದರೆ ವಿವೇಕಾ ನಂದರು ಕುವೆಂಪುಗೆ ಆದರ್ಶ ಎಂದು ತಿಳಿಸಿದರು.

ಅಮೆರಿಕ ಯುದ್ಧಕೋರ ರಾಷ್ಟ್ರ. ವೆನಿಜುವೆಲ್ಲ ಹಂಗಾಮಿ ಅಧ್ಯಕ್ಷನನ್ನಾಗಿ ಘೋಷಿಸಿಕೊಂಡಿರುವ ಅಮೆರಿಕ ಅಧ್ಯಕ್ಷ ಟ್ರಂಪ್ ಮುಂದೊಂದು ದಿನ ಭಾರತದ ಅಧ್ಯಕ್ಷ ಎಂದು ಹೇಳಿಕೊಂಡರೂ ಆಶ್ಚರ್ಯ ವಿಲ್ಲ. ಅಂತಹ ಅಮೆ ರಿಕದಲ್ಲಿ 20 ಮಂದಿ ಬೌದ್ಧ ಬಿಕ್ಕುಗಳು ಶಾಂತಿಗಾಗಿ ಮೌನ ಪಾದಯಾತ್ರೆ ನಡೆಸಿದರು. ಆ ಗುಂಪಿನ ಮುಂಚೂಣಿಯಲ್ಲಿ ಬೀದಿ ನಾಯಿಯೊಂದು ನಡೆಯುತ್ತಾ ಸಾಗಿತು. ವಿಶ್ವಶಾಂತಿ, ಅಹಿಂಸೆ, ಕರುಣೆಯನ್ನು ಶ್ವಾನವೂ ಕೋರುತ್ತಿದೆ ಎಂದು ಹೇಳಿದರು.

ಎಂ.ಆರ್.ಎಂ. ಪ್ರಕಾಶನ ಪ್ರಶಸ್ತಿ ಸ್ವೀಕರಿಸಿದ ಕವಿತಾ ಪ್ರಕಾಶನದ ಗಣೇಶ ಅಮೀನಗಡ ಮಾತನಾಡಿ, ದೇವರು ರುಜು ಮಾಡಿದನು; ರಸವಶನಾಗುತ ಕವಿ ಅದ ನೋಡಿದನು ಎಂದು ಕುವೆಂಪು ಕವಿತೆಗಳ ಮಹತ್ವವನ್ನು ಸಾರಿ ಪ್ರತಿನಿತ್ಯ ಪ್ರತಿಯೊಬ್ಬರೂ ಕುವೆಂಪು ಸಾಹಿತ್ಯದ ಎರಡು ಸಾಲಗಳನ್ನಾದರೂ ಓದಬೇಕು. ಯಾಚೇನಹಳ್ಳಿಯಲ್ಲಿ ಕುವೆಂಪು ಸ್ಮಾರಕ ನಿರ್ಮಿಸುವ ಮೂಲಕ ಅವರ ವಿಚಾರಗಳನ್ನು ಹೂತಿಲ್ಲ ಬಿತ್ತಿದ್ದಾರೆ ಎಂದರು.

ಯಾಚೇನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಂ.ಆರ್.ಎಂ.ಪ್ರಕಾಶನ ಸಂಸ್ಥೆಯು ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಗ್ರಾಮೀಣ ಪರಿಸರದಲ್ಲಿ ಆಯೋಜಿಸಿ ಇಲ್ಲಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದ್ದಾರೆ. ಇಬ್ಬರು ಸಾಧಕರಿಗೆ ಪ್ರಶಸ್ತಿ ನೀಡಿ ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ಇಡೀ ಭಾರತಕ್ಕೆ, ಯುವಶಕ್ತಿಗೆ ಪ್ರೇರಣೆಯಾಗಿರುವ ಸ್ವಾಮಿ ವಿವೇಕಾನಂದರು ತಪಸ್ಸು ಮಾಡಿದ ಕನ್ಯಾಕುಮಾರಿ ವ್ಯಾಪಾರಿ ಕೇಂದ್ರವಾಗಿದ್ದು ಹಿಂದಿನಂತಿಲ್ಲ. ಅಲ್ಲಿ ಹಿಂದೆ ಆಗಿದ್ದ ರೋಮಾಂಚನ ಇತ್ತೀಚೆಗೆ ತೆರಳಿದ್ದಾಗ ಆಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಕಥೆಗಾರ ಅದೀಬ್ ಅಖರ್ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಮಾತನಾಡಿ, ಮಹಾಭಾರತದ ದ್ರೌಪದಿ ವಸ್ತ್ರಾಪಹರಣ ಪ್ರಸಂಗವನ್ನು ವಿವರಿಸಿ ಶ್ರೀಕೃಷ್ಣನು ದ್ರೌಪದಿಗೆ ನಾವು ಯಾರಿಗಾದರೂ ಸಹಾಯ ಮಾಡಿದರೆ ದೇವರು ನಮಗೆ ಸಹಾಯ ಮಾಡಲು ಯಾರ ರೂಪದಲ್ಲಾದರೂ ಬರುತ್ತಾನೆ ಎಂಬ ಶ್ರೀ ಕೃಷ್ಣನ ಸಂದೇಶವನ್ನು ಸ್ಮರಿಸಿದರು.

ದ್ವಿತೀಯ ಪಿಯು ವಿದ್ಯಾರ್ಥಿನಿ ನಿಧಿ ಎಸ್. ಪಿ. ಹಾಗೂ ಅನ್ವಿತಾ ಮೆನನ್ ಅವರ ?ದಿ ಕಾಪಿ? ಕೃತಿ ಕುರಿತು ಪ್ರಕಾಶಕ ಹಾಗೂ ಮಂಡ್ಯ ವಿವಿಯ ಕನ್ನಡ ಅಧ್ಯಾಪಕ ಉಮೇಶ್ ದಡಮಹಳ್ಳಿ ಮಾತನಾಡಿದರು. ಎಂಆರ್‌ಎಂ ಪ್ರಕಾಶನದ ಪ್ರಕಾಶಕ ಮಂಜು ಮುತ್ತೇಗೆರೆ ಅಧ್ಯಕ್ಷತೆ ವಹಿಸಿದ್ದರು. ಲೇಖಕ ಹಾಗೂ ಪತ್ರಕರ್ತ ಚಂದ್ರಶೇಖರ ದ.ಕೋ. ಹಳ್ಳಿ ಆಶಯ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಕವಯಿತ್ರಿ ಎಚ್.ಆರ್. ಕನ್ನಿಕ, ಬನ್ನೂರಿನ ಆಕಾಶ್ ಸ್ಟೀಲ್ಸ್ ಅಂಡ್ ಸಿಮೆಂಟ್ ಮಾಲೀಕರಾದ ಜಿ.ಸುರೇಶ್, ಕವಿ ಹಾಗೂ ಶಿಕ್ಷಕ ಕೊತ್ತತ್ತಿ ರಾಜು ಹಾಗೂ ನೇರಲಕೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಇಒ ನೇರಲಕೆರೆ ಲೋಕೇಶ್ ಭಾಗವಹಿಸಿದ್ದರು. ಎಸ್‌ಎನ್ ಎಸ್ ಎಕ್ಸಲೆನ್ಸ್ ಪಿಯು ಕಾಲೇಜಿನ ಮಂಜೇಶ್ ಹಾಗೂ ಆಡಳಿತಾಧಿಕಾರಿ ಅವಿನಾಶ್, ಲೇಖಕಿ ನಿಧಿ ಅವರ ಹೆತ್ತವರಾದ ಪ್ರವೀಣ್ಕುಮಾರ್ ಹಾಗೂ ಪೂರ್ಣಿಮಾ ಹಾಜರಿದ್ದರು.

ವಸುಧೈವ ಕುಟುಂಬಕಂ ಎಲ್ಲ ಧರ್ಮಗಳ ಸಾರ

ಕಾರ್ಯಕ್ರಮದಲ್ಲಿ ಅವಧೂತ ಮಾದಪ್ಪ ಮತ್ತು ದಿ ಕಾಪಿ ಕೃತಿಗಳನ್ನು ಬಿಡುಗಡೆ ಮಾಡಿ ಆಶೀರ್ವನ ನೀಡಿದ ಬೆಂಗಳೂರು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠದ ಪೀಠಾಧಿಪತಿ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ನಮಗೆ ಇಂದು ಮತ್ತೊಂದು ಧರ್ಮದ ಅವಶ್ಯಕತೆ ಇಲ್ಲ. ನಮಗೆ ಬೇಕಾಗಿರುವುದು ಮಾನವೀಯ ಧರ್ಮ. ವಸುಧೈವ ಕುಟುಂಬಕಂ ಎಂಬುದು ಎಲ್ಲ ಧರ್ಮಗಳ ಸಾರ. ಸರ್ವೇಜನಾ ಸುಖಿನೋ ಭವಂತು ಎಂದು ಸ್ವಾಮಿ ವಿವೇಕಾನಂದರು ನಂಬಿದ್ದರು. ಧರ್ಮಗಳಲ್ಲಿರುವ ಅಂಕುಡೊಂಕುಗಳನ್ನು ಮೊದಲು ತೊಡೆದು ಹಾಕೋಣ. ಮೊದಲು ನಾವು ಪರಿವರ್ತನೆ ಆಗೋಣ. ಆಮೇಲೆ ಸಮಾಜವನ್ನು ಬದಲಾಯಿಸೋಣ. ಮಾನವೀಯ ಧರ್ಮದ, ದಯೆಯುಳ್ಳ, ರಾಷ್ಟ್ರಕವಿ ಕುವೆಂಪು ವಿಶ್ವಮಾನವ ಸಂದೇಶ ಅಳವಡಿಸಿಕೊಳ್ಳೋಣ ಎಂದು ಕರೆ ನೀಡಿದರು.

ವಿಶ್ವ ಮಾನವ ಧರ್ಮ ಒಂದು ವಿಶಿಷ್ಟ ಕಲ್ಪನೆ

ಅವಧೂತ ಮಾದಪ್ಪ ಕೃತಿ ಕರ್ತೃ ಹಾಗೂ ಶ್ರೀರಾಮಕೃಷ್ಣ ಸೇವಾ ಕೇಂದ್ರದ ಅಧ್ಯಕ್ಷ ನಾದಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ವಿಶ್ವ ಮಾನವ ಧರ್ಮ ಒಂದು ವಿಶಿಷ್ಟ ಕಲ್ಪನೆ. ಅಲ್ಲಿ ಯಾವುದೇ ಭೌತಿಕ ರಚನೆಗಳು, ಆಚರಣೆಗಳು ಇರುವುದಿಲ್ಲ. ಕುವೆಂಪು ಅವರ ಪಂಚಶೀಲ ತತ್ವಗಳನ್ನು ಆಧರಿಸಿದ ಆಂತರೀಕ ಉದ್ದೀಪನವೇ ಹೊರತು ಬಾಹ್ಯ ಆಚರಣೆಯಲ್ಲ. ಕುವೆಂಪು ಪ್ರೇರಿತ ವಿಶ್ವಮಾನವ ಧರ್ಮ ಜಂಗಮ ಹೊರತು ಸ್ಥಾವರವಲ್ಲ ಎಂದು ಸ್ಪಷ್ಟಪಡಿಸಿದರು.

10 ಸಾವಿರ ರೂ. ಪುರಸ್ಕಾರ

ಎಂ.ಆರ್.ಎಂ. ಪ್ರಶಸ್ತಿ ಸ್ವೀಕರಿಸಿದ ಇಬ್ಬರೂ ಪ್ರಶಸ್ತಿ ಪುರಸ್ಕೃತರಿಗೂ ತಲಾ 10 ಸಾವಿರ ರೂಪಾಯಿ ನಗದು ಪುರಸ್ಕಾರ, ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಯಾಚೇನಹಳ್ಳಿಯ ಚನ್ನಾಜಮ್ಮ ಅವರನ್ನು ಸನ್ಮಾನಿಸಲಾಯಿತು.

ಮೊದಲ ಪುಟದಿಂದ

ಚುನಾವಣೆ ನಡೆಸಲು ಸಿದ್ಧ

ಕೋರಲು ಆಗಮಿಸಿದ್ದ ಸಂದರ್ಭ ಮಂಗಳವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು ಗ್ರೇಟರ್ ಬೆಂಗಳೂರು ಜೊತೆಗೆ ರಾಜ್ಯದ ನಗರಪಾಲಿಕೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ನಾವು ತಯಾರಾಗಿದ್ದೇವೆ ಎಂದು ತಿಳಿಸಿದರು.

ಈ ಚುನಾವಣೆಗಳಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿಯು ಯಾವುದೇ ಪರಿಣಾಮ ಬೀರುವುದಿಲ್ಲ. ಆ ಎರಡೂ ಪಕ್ಷದಿಂದ ಒಬ್ಬರೇ ಅಭ್ಯರ್ಥಿ ಆಗುತ್ತಾರೆ. ಕಾಂಗ್ರೆಸ್ ಪರ ಬೀಳುವ ಮತಗಳು ನಮ್ಮ ಅಭ್ಯರ್ಥಿಗೆ ಬಿದ್ದೇ ಬೀಳುತ್ತವೆ ಎಂದು ಅಭಿಪ್ರಾಯಪಟ್ಟರು.

ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಮತ್ತು ನರೇಗಾ ಮರು ಜಾರಿಗೆ ಆಗ್ರಹಿಸಿ ವಿಶೇಷ ಅಧಿವೇಶನ ನಡೆಸುವ ಬಗ್ಗೆ ನಾಳೆ ಬುಧವಾರ ವಿಶೇಷ ಸಚಿವ ಸಂಪುಟ ಸಭೆ ಕರೆಯಲಾಗಿದೆ. ಅಲ್ಲಿ ಚರ್ಚಿಸುತ್ತೇವೆ ಎಂದು ಸಿಎಂ ಮಾಹಿತಿ ನೀಡಿದರು.

ಎಚ್.ಡಿ.ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಬರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ಅನಾರೋಗ್ಯದಿಂದ ಚೇತರಿಸಿಕೊಂಡಿದ್ದಾರೆ. ಈಗ ಕ್ರಿಯಾಶೀಲ ಆಗಿದ್ದಾರೆ. ಅವರು ರಾಜ್ಯ ರಾಜಕಾರಣಕ್ಕೆ ಬರುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ ಎಂದರು.

ಜನಾಂದೋಲನ

ನಾವು ಶೇ 10ರಷ್ಟು ಹಣ ಮಾತ್ರ ಕೊಡುತ್ತಿದ್ದೆವು. ಹೊಸ ಕಾಯ್ದೆಯಲ್ಲಿ ಶೇ 40ರಷ್ಟು ರಾಜ್ಯ ಕೊಡಬೇಕು. ಶೇ 60ರಷ್ಟು ಕೇಂದ್ರ ಸರ್ಕಾರ ಕೊಡುತ್ತದೆ. ಇದರಿಂದ ರಾಜ್ಯಕ್ಕೆ ಸುಮಾರು 2,500 ಕೋಟಿ ಹೊರೆ ಬೀಳಲಿದೆ ಎಂದು ಅವರು ಮಾಹಿತಿ ನೀಡಿದರು.ಮತ್ತೊಮ್ಮೆ ಗಾಂಧೀಜಿ ಕೊಲೆ: ನರೇಗಾ ಕಾಯ್ದೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 365 ದಿನಗಳ ಕಾಲ ಕೆಲಸ ಕೇಳಬಹುದಾಗಿತ್ತು. ಕಾರ್ಮಿಕರು ಅವರ ಊರಿನಲ್ಲಿ, ಅವರ ಜಮೀನಿನಲ್ಲಿಯೇ ಕೆಲಸ ಮಾಡಬಹುದ

ರಾಮೋತ್ಸವ: ಸ್ತಬ್ದ ಚಿತ್ರಗಳ ಮೂಡಿಬರಲಿದೆ ಪುರಾಣದ ಕಥೆಗಳು

ಚಾಮುಂಡೇಶ್ವರಿ, ಗಣಪತಿ, ಆಂಜನೇಯ ಮತ್ತು ಶ್ರೀ ರಾಮನ ಕಥೆಗಳ ಪ್ರದರ್ಶನ । ಮಡಿಕೇರಿಯ ಪ್ರಸಿದ್ದ ಟ್ಯಾಬ್ಲೋಗಳು

ಬಿ.ವಿ.ಸೂರ್ಯ ಪ್ರಕಾಶ್

ರಾಮನಗರ: ರಾಮೋತ್ಸವ 2026 ಜನಮಾನಸದಲ್ಲಿ ಬಹುಕಾಲ ಉಳಿಯುವಂತೆ ಆಯೋಜನೆಯಾಗುತ್ತಿದೆ. ಮಡಿಕೇರಿಯ ಆಕರ್ಷಕ ಸ್ತಬ್ದಚಿತ್ರಗಳು ರಾಮೋತ್ಸವ ಹಬ್ಬದ ಮೆರಗು ಹೆಚ್ಚಿಸಲಿವೆ.

ಮಡಿಕೇರಿ ಮೂಲದ ಸ್ತಬ್ಧಚಿತ್ರ ಕಲಾವಿದ ಹರೀಶ್ ನೇತೃತ್ವದಲ್ಲಿ ಕಳೆದ ಕೆಲವು ದಿನಗಳಿಂದ ನಾಲ್ಕು ಟ್ಯಾಬ್ಲೋಗಳು ಸಿದ್ದವಾಗುತ್ತಿವೆ. ಇದೇ ಮೊದಲ ಬಾರಿಗೆ ರಾಮನಗರದಲ್ಲಿ ಮಡಿಕೇರಿಯ ವೈಭವ ಇಲ್ಲಿ ಸಾಕಾರಗೊಳಿಸಲು ಎಲ್ಲಾ ಸಿದ್ದತೆಗಳನ್ನು ಕೈಗೊಳ್ಳಲಾಗುತ್ತಿದೆ. ಚಾಮುಂಡೇಶ್ವರಿ, ಗಣಪತಿ, ಆಂಜನೇಯ ಮತ್ತು ಶ್ರೀರಾಮರ ಪುರಾಣ ಪ್ರಸಿದ್ದ ಕಥಾ ಹಂದರಗಳು ಉಳ್ಳ ಧ್ವನಿ, ಬೆಳಕಿನ ಸಂಯೋಜನೆಯೊಂದಿಗೆ ಯಂತ್ರ ಚಾಲಿತ ಗೊಂಬೆಗಳು ಸಾರ್ವಜನಿಕರಿಗೆ ಕಥಾ ಹಂದರವನ್ನು ಕಟ್ಟಿಕೊಡಲಿದೆ. ಒಂದೊಂದು ಟ್ಯಾಬ್ಲೋಗಳು 14 ಅಡಿ ಅಗಲ ಇದ್ದು, ಅದು ಪ್ರದರ್ಶನಗೊಳ್ಳಲಿರುವ ನಿಗದಿತ ಸ್ಥಳಕ್ಕೆ ತೆರಳಿದ ಮೇಲೆ ಕಲಾಕೃತಿಗಳು 18 ಅಡಿ ಅಗಲದಷ್ಟು ಹರಡಿಕೊಳ್ಳಲಿವೆ.

ಜ.16ರಂದು ಪ್ರದರ್ಶನ

ಇದೇ ಜನವರಿ 16ರಂದು ರಾತ್ರಿ ವರ್ಣರಂಜಿತ ಟ್ಯಾಬ್ಲೋಗಳು ನಾಗರೀಕರನ್ನು ಸೆಳೆಯಲಿದೆ. ನಗರದ ವಾಟರ್ ಟ್ಯಾಂಕ್ , ಹಳೇ ಬಸ್ ನಿಲ್ದಾಣ, ಐಜೂರು ವೃತ್ತ, ಕೆಂಪೇಗೌಡ ವೃತ್ತ, ರಾಯರದೊಡ್ಡಿ ವೃತ್ತ ಹಾಗೂ ಗಾಂಧಿನಗರ ವೃತ್ತಗಳಿಗೆ ಸಂಚರಿಸಿ ತಡರಾತ್ರಿವರೆಗೂ ಪ್ರದರ್ಶನ ನೀಡಲಿವೆ. ಈ ಸ್ಥಳಗಳು ಬದಲಾಗುವ ಸಾಧ್ಯತೆಗಳು ಇವೆ.

ಕಥೆಗಳು ಯಾವುದು?

ಗಣಪತಿಯಿಂದ ಮಮತಾಸುರ ವದೆ ಎಂಬ ಕಥಾ ಸಾರಾಂಶವನ್ನು ಈ ಬಾರಿ ರಾಮನಗರದ ರಾಮೋತ್ಸವದಲ್ಲಿ ಪರಿಚಯಿಸಲಾಗುತ್ತಿದೆ. ಇದೇ ಪ್ರಥಮ ಬಾರಿಗೆ ಈ ಕಥೆ ಪ್ರದರ್ಶನವಾಗುತ್ತಿದು ವಿಶೇಷ. ಚಾಮುಂಡೇಶ್ವರಿ ಅಮ್ಮನವರು ಬ್ರಹ್ಮಾಂ ಬಿಕೆಯ ಅವತಾರದಲ್ಲಿ ಅರುಣಾಸುರನ ಸಂಹಾರ ಎಂಬ ಕಥಾ ಸಾರಾಂಶವನ್ನು ಉಳ್ಳ ಪ್ರದರ್ಶನವೂ ನಾಗರೀಕರನ್ನು ಸೆಳೆಯಲಿದೆ. ಹೀಗೆ ಆಂಜನೇಯ ಮತ್ತು ಶ್ರೀರಾಮರ ಕಥೆ ಗಳು ಮೂಡಿ ಬರಲಿದ್ದು, ಈ ದೇವತೆಗಳ ಮಹಿಮೆಗಳನ್ನು ಸಾರಲಿವೆ.

ಮಡಿಕೇರಿ ಟ್ಯಾಬ್ಲೋಗಳ ವಿಶೇಷತೆ ಏನು?

ಮಡಿಕೇರಿ ಟ್ಯಾಬ್ಲೋಗಳ ತಂತ್ರಜ್ಞಾನದಿಂದ ಕೂಡಿದೆ. ಯಂತ್ರಗಳ ಸಹಾಯದಿಂದ ದೇವತಾ ಮೂರ್ತಿಗಳು ಕಥೆಗೆ ತಕ್ಕಂತೆ ಸಾರ್ವಜನಿಕರಿಗೆ ಪರಿಚಯವಾಗುತ್ತವೆ. ಚಾಮುಂಡೇಶ್ವರಿ ಅಮ್ಮನವರ ಕಥಾ ಮಾಲಿಕೆಯ ಟ್ಯಾಬ್ಲೋಗೆ ಮಡಿಕೇರಿಯ ಟ್ರೆಡಿಶನಲ್ ಕ್ರಿಯೇಶನ್ ನ ರಾಘವೇಂದ್ರ, ಗೌತಮ್ ಮತ್ತು ತಂಡ ಮಂಟಪವನ್ನು ಹಾಗೂ ಪ್ರಭಾವಳಿಯನ್ನು ಮಡಿಕೇರಿಯ ಪೂಜಾ ಲೈಟಿಂಗ್ ನ ನಜೀರ್ ಹಾಗೂ ಬೆಳಕಿನ ವ್ಯವಸ್ಥೆಯನ್ನು ಲೋಕೇಶ್, ಎಸ್ ಕೆ ಎಂ ಜಿ ಕ್ರಿಯೇಷನ್ ನವೀನ್ ರವರು ಟ್ಯಾಕ್ಟರ್ ಸೆಟ್ಟಿಂಗ್ ಮಾಡಿ ಕೊಡುತ್ತಿದ್ದಾರೆ. ಗಣಪತಿಯಿಂದ ಮಮತಾಸುರ ವಧೆ ಎಂಬ ಕಥಾ ಸಾರಾಂಶವನ್ನು ಉಳ್ಳ ಟ್ಯಾಬ್ಲೊದಲ್ಲಿ 20 ಕಲಾಕೃತಿಗಳು ಮೂಡಿ ಬರಲಿವೆ. ಮಡಿಕೇರಿಯ ಬಿ.ಎಂ.ಹರೀಶ್. ಎಸ್.ಎ.ವಿನಾಯಕ್, ಸುಮೇಶ್, ಸೂರಜ್, ಪ್ರಭಾವಳಿಯನ್ನು ಮಡಿಕೇರಿಯ ಪೂಜಾ ಲೈಟಿಂಗ್ ನ ನಜೀರ್ ಹಾಗೂ ಬೆಳಕಿನ ವ್ಯವಸ್ಥೆಯನ್ನು ಲೋಕೇಶ್ , ಮಂಟಪವನ್ನು ಸುಲ್ತಾನ ಹಾಗೂ ತಂಡದವರು ನಿರ್ಮಿಸುತ್ತಿದ್ದಾರೆ. ಎಸ್ ಕೆ ಎಂ ಜಿ ಕ್ರಿಯೇಷನ್ ನವೀನ್ ರವರು ಟ್ಯಾಕ್ಟರ್ ಸೆಟ್ಟಿಂಗ್ ನಡೆಸಿಕೊಡುತ್ತಿದ್ದಾರೆ.

ಶ್ರೀ ರಾಮ ದೇವರ ಬೆಟ್ಟದಲ್ಲಿ ಇಂದಿಗೂ ಕಾಗೆಗಳು ಕಾಣಿಸುವುದಿಲ್ಲವೇಕೆ?

14 ವರ್ಷಗಳ ವನವಾಸದ ವೇಳೆ ಶ್ರೀರಾಮರು ಸೀತಾ ಲಕ್ಷ್ಮಣರು ಈ ಬೆಟ್ಟದಲ್ಲಿ ನೆಲೆಸಿದ್ದರು ಎಂದು ಹೇಳಲಾಗುತ್ತದೆ. ಸೀತೆಯ ಬಾಯಾರಿಕೆಯನ್ನು ತಣಿಸುವ ಸಲುವಾಗಿ ಶ್ರೀರಾಮ ಬಾಣಬಿಟ್ಟು ಗಂಗೆಯನ್ನು ಹೊರ ತಂದರು. ಈಗಲೂ ಇದನ್ನು ಶ್ರೀರಾಮ ಸೋಣೆ ಎಂದು ಸ್ಥಳೀಯರು ಕರೆಯುತ್ತಾರೆ. ಕಾಕಾಸುರ ಎಂಬ ಅಸುರನನ್ನು ಶ್ರೀ ರಾಮನು ವಧಿಸುತ್ತಾರೆ. ಹೀಗಾಗಿಯೇ ಇಲ್ಲಿ ಈಗಲೂ ಕಾಗೆಗಳು ಕಾಣಿಸಿಗುವುದಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.



ಅರಣ್ಯ ಅಧಿಕಾರಿಗಳಿಗೆ ಸನ್ಮಾನ

ಸರಗೂರು: ರೈತರೊಂದಿಗೆ ಸದಾ ನಿಕಟ ಸಂಪರ್ಕ ಹೊಂದಿ ಜನಪರ ಸೇವೆ ಸಲ್ಲಿಸುತ್ತಿರುವ ಅರಣ್ಯ ಇಲಾಖೆ ಮೈಸೂರು ವಿಭಾಗದ ಸಿ.ಎಫ್ ಪರಮೇಶ್, ಸರಗೂರು ವಲಯ ಅರಣ್ಯಾಧಿಕಾರಿ ಅಕ್ಷಯ್ ಕುಮಾರ್, ಎಚ್.ಡಿ.ಕೋಟೆ ವಲಯ ಅರಣ್ಯಾಧಿಕಾರಿ ರವಿಕುಮಾರ್ ಅವರಿಗೆ ಹಳೆಯೂರು ಗ್ರಾಮಸ್ಥರು ಸನ್ಮಾನಿಸಿದರು.

ನಾಮಧಾರಿಗೌಡ ಸಮಾಜದ ಸರಗೂರು ತಾಲೂಕು ಅಧ್ಯಕ್ಷ ಹೆಚ್.ಡಿ.ರತ್ನಯ್ಯ, ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಹಳೆಯೂರು ಗಣೇಶ್, ಗ್ರಾಮಸ್ಥರಾದ ಅಶೋಕ್, ನಾಗರಾಜಪ್ಪ, ಸತೀಶ್, ಕೆಂಡಗಂಡಸ್ವಾಮಿ, ಎಚ್. ಎನ್. ಮಹೇಶ್, ಮಾದೇವ, ಪಾರ್ಶ್ವನಾಥ್, ಎಚ್.ಎಂ.ಗಣೇಶ್ ಸೇರಿದಂತೆ ಅನೇಕರಿದ್ದರು.

ಹಕ್ಕೋತ್ತಾಯ ಈಡೇರಿಗೆ ಒತ್ತಾಯ

ಚಾಮರಾಜನಗರ, ತಾಲ್ಲೂಕಿನ ಕೋಡಿಮೋಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡದುರಸ್ತಿ, ಜಿಲ್ಲಾ ಕೇಂದ್ರದ ಚಾಮರಾಜೇಶ್ವರ ಪಾರ್ಕ್ ನ ಅಭಿವೃದ್ಧಿ ಸೇರಿದಂತೆ ವಿವಿಧ ಹಕ್ಕೋತ್ತಾಯಗಳ ಈಡೇರಿಕೆಗೆ ಆಗ್ರಹಿಸಿ

ಭಗತ್ ಸಿಂಗ್ ಯುವ ಸೇನೆ ಹಾಗೂ ಜಿಲ್ಲಾ ಉಪ್ಪಾರ ಸಂಘದ ಪದಾಧಿಕಾರಿಗಳ ವತಿಯಿಂದ ಜಿಲ್ಲಾಧಿಕಾರಿ ಶ್ರೀ ರೂಪಾ ಅವರಿಗೆ ಮನವಿ ಸಲ್ಲಿಸಲಾಯಿತು. ಕೋಡಿಮೋಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ಸುಮಾರು ಆರೇಳು ವರ್ಷಗಳಿಂದ ದುರಸ್ತಿ ಬಿದ್ದಿದ್ದು, ಶೀಘ್ರವೇ ಸರ್ಕಾರದಿಂದ ಸೂಕ್ತ ಅನುದಾನ ಮಂಜೂರು ಮಾಡಿಸುವ ಮೂಲಕ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಿಕೊಡಬೇಕು. ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಪಾರ್ಕ್ ನಲ್ಲಿ ಮಕ್ಕಳ ಆಟೋಪಕರಣಗಳ ದುರಸ್ತಿ, ಪಟ್ಟಣದ ಪೂರ್ವ ಪೊಲೀಸ್ ಠಾಣೆ ಎದುರುಗಡೆಯಿಂದ ಚೆನ್ನಿಪುರ ಮೋಳೆ ಭಗೀರಥ ಮಹರ್ಷಿ ರಸ್ತೆ ಮಾರ್ಗ ರಸ್ತೆ ಮತ್ತು ಚರಂಡಿ ನಿರ್ಮಾಣ ಮತ್ತು ರಸ್ತೆ ಬದಿಗೆ



ಬೀದಿದೀಪಗಳ ಅಳವಡಿಕೆ ಮಾಡುವುದು, ಚಾಮರಾಜನಗರದಿಂದ ಬಿ ಆರ್‌ಹಿಲ್ಸ್ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಕೋಡಿಮೋಳೆ ಗ್ರಾಮದ ಎರಡು ಬದಿಯ ಚರಂಡಿ ನಿರ್ಮಾಣ ಮಾಡಿಕೊಡಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಇದೇ ಸಂದರ್ಭದಲ್ಲಿ ಗಡಿ ಯಜಮಾನರಾದ ಜಯಸ್ವಾಮಿ, ಹರದನಹಳ್ಳಿ ಪಿಎಸಿಸಿ ಮಾಜಿ ಅಧ್ಯಕ್ಷ ಬಂಗಾರ ಶೆಟ್ಟಿ, ಮಹದೇವಸ್ವಾಮಿ, ಭಗತ್ ಸಿಂಗ್ ಯುವಸೇನೆ ಅಧ್ಯಕ್ಷ ಕೋಡಿಮೋಳೆ ಕಾಂತರಾಜು, ಜಿಲ್ಲಾ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್.ನಾಗರಾಜು ಹಾಜರಿದ್ದರು.

ಸ್ವಚ್ಛ ಕಾರ್ಮಿಕರು, ಸಿಬ್ಬಂದಿಗಳಿಗೆ ತರಬೇತಿ

ಮೈಸೂರು: ಮಹಾನಗರ ಪಾಲಿಕೆಯ ವತಿಯಿಂದ ಕೇಂದ್ರ ಸರ್ಕಾರದ 'ಸ್ವಚ್ಛ ಭಾರತ್ ಮಿಷನ್ 2.0' ಯೋಜನೆಯ ಅಡಿಯಲ್ಲಿ ಪಾಲಿಕೆಯ ಸ್ವಚ್ಛತಾ ಸಿಬ್ಬಂದಿಗಳಿಗಾಗಿ ಒಂದು ದಿನದ ವಿಶೇಷ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಮಂಗಳವಾರದಂದು ನಗರದ ಎಸ್‌ಐಯುಡಿ ಆವರಣದಲ್ಲಿ ಚಾಲನೆ ನೀಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಮೈಸೂರು ನಗರವು ಸ್ವಚ್ಛತೆಯಲ್ಲಿ ದೇಶದಲ್ಲೇ ಅತ್ಯುತ್ತಮ ಶ್ರೇಣಿ ಪಡೆಯುತ್ತಿರುವುದಕ್ಕೆ ಪೌರಕಾರ್ಮಿಕರ ಅಪಾರ ಶ್ರಮವೇ ಪ್ರಮುಖ ಕಾರಣವಾಗಿದೆ. ಪೌರಕಾರ್ಮಿಕರ ಹಿತದೃಷ್ಟಿಯಿಂದ ಅವರಿಗೆ ಕರ್ತವ್ಯದ ಸಮಯದಲ್ಲಿ ಅನುಕೂಲವಾಗುವಂತೆ ಉತ್ತಮ ಗುಣಮಟ್ಟದ ಶೂಗಳು ಮತ್ತು ಕೈಗವಸುಗಳನ್ನು ವಿತರಿಸಲು ಈಗಾಗಲೇ ಸೂಚನೆ ನೀಡಲಾಗಿದ್ದು, ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಕಡೆಗೆ ಗಮನ ನೀಡಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎಸ್. ಮಂಜೇಗೌಡ ಮಾತನಾಡಿ, ತಾವು ಸೈನಿಕರಾಗಿ ಸೇವೆ ಸಲ್ಲಿಸಿದ ದಿನಗಳನ್ನು ಸ್ಮರಿಸಿಕೊಂಡು ಪೌರಕಾರ್ಮಿಕರೂ ಸೈನಿಕರಂತೆ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಪೌರಕಾರ್ಮಿಕರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕು ಮತ್ತು ತಮ್ಮ ಮಕ್ಕಳನ್ನು ಉತ್ತಮವಾಗಿ ಓದಿಸುವ ಮೂಲಕ ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಕರೆ ನೀಡಿದರು.

ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಅಸಾದ್ ಉರ್ ರೆಹಮಾನ್ ಶರೀಫ್ ಮಾತನಾಡಿ, ನಗರದ ಸ್ವಚ್ಛತೆಯಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮುಖ್ಯವಾಗಿದ್ದು, ಅವರ ಶ್ರಮ ಶ್ಲಾಘನೀಯವಾಗಿದೆ. ಕೆಲಸದ ಜೊತೆಗೆ ತಮ್ಮ ಭವಿಷ್ಯ ಮತ್ತು ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು ಎಂದು ಕಿವಿಮಾತು ಹೇಳಿದರು. ಈ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಪಾಲಿಕೆ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ್, ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಶ್ರೀನಿವಾಸ್ , ವಲಯ-1ರ ವಲಯ ಆಯುಕ್ತ ರಮೇಶ್, ಪಾಲಿಕೆಯ ವಲಯ-5ರ ವಲಯ ಆಯುಕ್ತ ಮಂಜುನಾಥರೆಡ್ಡಿ, ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಮೀನಾಕ್ಷಿ, ಭಗೀರಥ ಸಂಸ್ಥೆಯ ಸಂಸ್ಥಾಪಕ ಹಾಗೂ ಹಿರಿಯ ಸಮಾಲೋಚಕ ಕುಲಕರ್ಣಿ, ಅಖಿಲ ಭಾರತ ಸ್ಥಳೀಯ ಸ್ವಯಂ ಸರ್ಕಾರ ಸಂಸ್ಥೆ ಪ್ರಾದೇಶಿಕ ನಿರ್ದೇಶಕ ಶ್ರೀಕಿರಣ್ ಹಾಗೂ ಹಿರಿಯ ಸಮಾಲೋಚಕ ಜಿತೇಂದ್ರ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆಯು ಘನತ್ಯಾಜ್ಯ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಉತ್ತಮ ಪದ್ಧತಿಗಳ ಕುರಿತು ಅಧ್ಯಯನ ನಡೆಸಲು ಮತ್ತು ತರಬೇತಿ ಪಡೆಯಲು ಹುಬ್ಬಳ್ಳಿ-ಧಾರವಾಡ ಹಾಗೂ ಬಳ್ಳಾರಿ ಮಹಾನಗರ ಪಾಲಿಕೆಗಳ ಸುಮಾರು 90ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕ್ಷೇತ್ರ ಭೇಟಿ ನೀಡಿದ್ದರು.

ಜೀತಮುಕ್ತರ ಪುನರ್ವಸತಿಗಾಗಿ ಸಚಿವರಿಗೆ ಆಗ್ರಹ

ಎಚ್.ಡಿ.ಕೋಟೆ: ಮೈಸೂರಿನ ಜಲದರ್ಶಿನಿ ಪ್ರವಾಸಿ ಮಂದಿರದಲ್ಲಿ ಸಮಾಜ ಕಲ್ಯಾಣ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್, ಸಿ.ಮಹದೇವಪ್ಪ ಅವರು ಜೀವಿಕ ಸಂಘಟನೆ ಹಾಗೂ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕ ಒಕ್ಕೂಟದ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದರು.

ಜೀವಿಕ ಜಿಲ್ಲಾ ಸಂಚಾಲಕ ಬಸವರಾಜ್ ಮಾತಾನಾಡಿ, ರಾಜ್ಯದಲ್ಲಿ ಸುಮಾರು ಏಳು ಸಾವಿರ ಜೀತಮುಕ್ತರಿದ್ದು, ಅವರಿಗೆ ಸಮಗ್ರ ಪರಿಹಾರ ಪುನರ್ವಸತಿ ಕಲ್ಪಿಸದೆ ಜೀತ ಮುಕ್ತರು ಜೀವನ ಮಾಡಲು ತುಂಬಾ ಕಷ್ಟಪಡುತ್ತಿದ್ದಾರೆ. ಅದ್ದರಿಂದ, 2025ನೇ ಆಗಸ್ಟ್ ನಲ್ಲಿ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಸಮಾವೇಶದಲ್ಲಿ ನೀವು ಜೀತ ಮುಕ್ತರೊಂದಿಗೆ ಮಾತಾನಾಡಿ

ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ರಾಜ್ಯ ಮಟ್ಟದ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುವ ಭರವಸೆ ನೀಡಿದ್ದೀರಿ ಈ ನಿಟ್ಟಿನಲ್ಲಿ ಸಿಎಂ ನೇತೃತ್ವದಲ್ಲಿ ತ್ವರಿತಗತಿಯಲ್ಲಿ ಸಭೆ ಮಾಡುವಂತೆ ಮನವಿ ಮಾಡಿದರು.

ಜೀವಿಕ ರಾಜ್ಯ ಸಂಘಟನಾ ಸಂಚಾಲಕ ಉಮೇಶ್ ಮಾತಾನಾಡಿ, ಜೀತ ಮುಕ್ತರ ಪುನರ್ವಸತಿಗೆ ಮಾರಕವಾಗಿರುವ ಎಸ್ ಒ ಪಿ ಅನ್ನು ಸರ್ಕಾರ ಈ ಕೂಡಲೇ ರದ್ದುಗೊಳಿಸಿ, 1976ರ ಜೀತ ಪದ್ಧತಿ ರದ್ದತಿ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಜೀತ ಮುಕ್ತರ ಸಮಗ್ರ ಪರಿಹಾರ ಪುನರ್ವಸತಿ ಜವಾಬ್ದಾರಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯದ್ದಾಗಿದ್ದು, ಈ ಇಲಾಖೆಯನ್ನು ಸಂಪೂರ್ಣ ಜವಾಬ್ದಾರಿಯುತವಾಗಿ ಕೆಲಸ ಮಾಡಲು ಮುಖ್ಯಮಂತ್ರಿಗಳನ್ನು ಸಭೆಗೆ ಆಹ್ವಾನಿಸಬೇಕು. ಮುಂದಿನ ಬಜೆಟ್ ಒಳಗೆ ಸಭೆ ಕರೆದು ಬಜೆಟ್ ನಲ್ಲಿ ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಜೀವಿಕ ರಾಜ್ಯ ಸಂಘಟನೆಯ ತಾಲೂಕು ಸಂಚಾಲಕ ಚಂದ್ರಶೇಖರ ಮೂರ್ತಿ, ಶಿವರಾಜ್, ಒಕ್ಕೂಟದ ಅಧ್ಯಕ್ಷ ಬಸವರಾಜ್, ಗಣೇಶ, ಮುಖಂಡರಾದ ಮಲ್ಲಿಗಮ್ಮ, ಸವಿತಾ, ನಟರಾಜ್, ಭೋಗನಂಜ, ನಾಗೇಂದ್ರ, ಜವರಯ್ಯ, ಪುಟ್ಟಸ್ವಾಮಿ, ಗಣೇಶ, ಸಿದ್ದಯ್ಯ ಮುಂತಾದವರು ಇದ್ದಾರೆ.

> ನಮ್ಮ ಸರ್ಕಾರ ಸಂಪೂರ್ಣವಾಗಿ ಜೀತ ನಿರ್ಮೂಲನೆಗೆ ಸಹಕಾರ ನೀಡುತ್ತದೆ, ನನ್ನ ಮೊದಲ ಆದ್ಯತೆ ಜೀತ ವಿಮುಕ್ತರ ಪುನರ್ವಸತಿ, ಸಫಾಯಿ ಕರ್ಮಚಾರಿ ಅಭಿವೃದ್ಧಿ, ದೇವದಾಸಿ ನಿರ್ಮೂಲನೆ, ಅಲೆಮಾರಿಗಳ ಅಭಿವೃದ್ಧಿ, ಪೌರಕಾರ್ಮಿಕರ ಪ್ರಗತಿ ಸಲುವಾದ ಸಮಗ್ರ ಕೆಲಸಗಳನ್ನು ಮಾಡುವ ಉದ್ದೇಶ ಹೊಂದಿದ್ದೇವೆ. ಈ ಹಿನ್ನೆಲೆಯಲ್ಲಿ ನಾನು ಶೀಘ್ರದಲ್ಲೇ ಮುಖ್ಯಮಂತ್ರಿ ನೇತೃತ್ವದಲ್ಲಿ ರಾಜ್ಯಮಟ್ಟದ ಸಭೆಯನ್ನು ಏರ್ಪಡಿಸಲಾಗುವುದು.
>
> ಎಚ್.ಸಿ.ಮಹದೇವಪ್ಪ
> ಜಿಲ್ಲಾ ಉಸ್ತುವಾರಿ ಸಚಿವ

ಸಚಿವ ಎಚ್.ಸಿ.ಮಹದೇವಪ್ಪ ಹೇಳಿಕೆ

ಮನರೇಗ ತಿದ್ದುಪಡಿ ವಾಪಾಸ್‌ಗಾಗಿ ಹೋರಾಟ

ಮೈಸೂರು: ಮಹಾತ್ಮ ಗಾಂಧಿ ಉದ್ಯೋಗ ಖಾತರಿ (ಮನರೇಗಾ) ಯೋಜನೆ ಹೆಸರು ಬದಲಿಸಿ ಕೆಲವೊಂದು ತಿದ್ದುಪಡಿ ಮಾಡಿರುವ ಕೇಂದ್ರದ ವಿಬಿ ರಾಮ್ ಜೀ ಕಾಯ್ದೆ ವಾಪಾಸ್ ಪಡೆಯುವವರೆಗೂ ಕಾಂಗ್ರೆಸ್ ನಿರಂತರವಾಗಿ ಹೋರಾಟ ನಡೆಸಲಿದೆ ಎಂದುಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ನಗರ ಕಾಂಗ್ರೆಸ್ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಿಗೆ ಮರಣ ಶಾಸನವಾಗಿದ್ದು ಇದರ ವಿರುದ್ಧ ಹೋರಾಟ ನಡೆಸಲಾಗುವುದು. ಕೇಂದ್ರ ಬಿಜೆಪಿ ಜಾರಿಗೆ ತರುತ್ತಿರುವುದು ಕರಾಳ ಶಾಸನವಾಗಿದೆ. ಬಡವರು, ಕಾರ್ಮಿಕರ ವಿರೋಧಿಯಾಗಿದೆ. 2005 ರಲ್ಲಿ ಅಂದಿನ ಯುಪಿಎ ಸರ್ಕಾರದಲ್ಲಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಜಾರಿಗೆ ಬಂದ ಯೋಜನೆ ಇದಾಗಿದೆ. ಮನರೇಗಾ ಯೋಜನೆ ಬಡ ಜನರಿಗೆ ಉದ್ಯೋಗ ಖಾತರಿ ನೀಡಿತ್ತು. ಮಹಾತ್ಮ ಗಾಂಧೀಜಿಯವರ ಅಂತ್ಯೋದಯ ಮತ್ತು ಸ್ವರಾಜ್ ಆಶಯವನ್ನು ಒಳಗೊಂಡಿತ್ತು. ಮನರೇಗಾ ತಿದ್ದುಪಡಿಯೂ ದುಡಿಯುವ ಹಕ್ಕಿನ ವಿರುದ್ಧವಾದ ಕಾಯ್ದೆಯಾಗಿದೆ ಎಂದರು. ಮಹಾತ್ಮ ಗಾಂಧೀಜಿ ಹೆಸರನ್ನು ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರ ರಾಷ್ಟ್ರಕ್ಕೆ ಮಾಡಿದ ದೊಡ್ಡ ಅಪಮಾನ. ಇದು ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಅವಮಾನವಾಗಿದೆ. ಕೇಂದ್ರದ ಎನ್‌ಡಿಎ ಸರ್ಕಾರ ಅನೇಕ ಹೆಸರುಗಳನ್ನು ಬದಲಾವಣೆ ಮಾಡುತ್ತಿದ್ದಾರೆ. ಆದರೆ, ದೇಶದ ಅಭಿವೃದ್ಧಿ, ಜನರ ಸ್ಥಿತಿ ಹಾಗೆಯೇ ಇದೆ ಎಂದು ಹೇಳಿದರು. ಮನರೇಗಾ ತ

ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಪುಟ್ಟರಂಗಶೆಟ್ಟಿ ಭೂಮಿಪೂಜೆ

ಚಾಮರಾಜನಗರ, ಹೈಮಾಸ್ಟ್, ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ತಾಲ್ಲೂಕಿನ ಪುಣಜನೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಎತ್ತೇಗೌಡನದೊಡ್ಡಿ, ಶ್ರೀನಿವಾಸಪುರ, ಮುನೇಶ್ವರ ಕಾಲೋನಿ, ಹೊಸಪೋಡು, ಭದ್ರಯ್ಯನಪೋಡು, ಗೋಡೆ ಮಡುವಿನದೊಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ಕಾಲೋನಿಗಳಲ್ಲಿ ಎಸ್ಸಿಪಿ, ಟಿಎಸ್ಪಿ ಯೋಜನೆ ಅನುದಾನ1.5ಕೋಟಿ ರೂ.ವೆಚ್ಚದಲ್ಲಿ ಹೈಮಾಸ್ಟ್, ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿನ ಜನರಿಗೆ ಕುಡಿಯುವ ನೀರು, ರಸ್ತೆ, ಚರಂಡಿಯಂತಹ ಮೂಲಸೌಕರ್ಯ ಕಲ್ಪಿಸುತ್ತ ಬರಲಾಗಿದೆ. ಇದೀಗ ಹಾಡಿಗಳ ಕಾಲೋನಿಗಳಿಗೆ ಹೈಮಾಸ್ಟ್ ಸೇರಿದಂತೆ ಸೋಲಾರ್‌ಲೈಟ್ ಅಳವಡಿಸುವ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು. ಗ್ರಾಮಗಳ ಕಾಲೋನಿಗಳಿಗೆ ಅಗತ್ಯವಾಗಿ ಬೇಕಾದ ರಸ್ತೆ, ಚರಂಡಿ ಸಮುದಾಯ ಭವನ, ಕುಡಿಯುವ ನೀರು, ಗಂಗಾ ಕಲ್ಯಾಣಯೋಜನೆ, ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ, ನಿವೇಶನ, ಸೇರಿದಂತೆ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಕಲ್ಪಿಸಲಾಗಿದೆ.ಮುಂದಿನ ದಿನಗಳಲ್ಲಿ ಇನ್ನು ಅಗತ್ಯ ಮೂಲಸೌಕರ್ಯ ಕಲ್ಪಿಸಲು ಬದ್ದ ಎಂದರು. ಇದೇ ಸಂದರ್ಭದಲ್ಲಿ ಪುಣಜನೂರು ಗ್ರಾಮಪಂಚಾಯಿತಿ ಉಪಾಧ್ಯಕ್ಷ ರಾಚಪ್ಪ, ಪಿಎಸಿಸಿ ಅಧ್ಯಕ್ಷ ಮಣಿನಾಯ್ಕ, ಮುಖಂಡರಾದ ಶಾಮೀರ್ ಪಾಷಾ, ತಾಪಂ ಮಾಜಿ ಸದಸ್ಯ ಕುಮಾರ ನಾಯಕ, ಗ್ರಾಪಂ ಮಾಜಿ ಅಧ್ಯಕ್ಷೆ ಶಾಂತಮ್ಮ, ಜಡೆಯಪ್ಪ, ಉಲ್ಲೇಶ್ ನಾಯಕ, ಗಣೇಶ ನಾಯಕ, ಶಂಕರ್, ಕೆಆರ್‌ಐಡಿಎಲ್ ಎಂಜಿನಿಯರ್ ಮಹದೇವಪ್ರಸಾದ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಭೋವಿ ದಲಿತ ಸಮುದಾಯಕ್ಕೆ ಸೇರಿದ ಜಾಗ ವಿವಾದಿತವಲ್ಲ: ಸ್ಪಷ್ಟನೆ

ಮೈಸೂರು:ಜಯಲಕ್ಷ್ಮಿ ಪುರಂ ಕಾಳಿದಾಸ ರಸ್ತೆ ಸಮೀಪದ ಹೆಸಿಕಲ್ ಸರ್ವೆ ನಂಬರ್ 155 ರಲ್ಲಿ ಬರುವ 10 ಎಕರೆ ಜಮೀನು ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಗೆ ಸೇರಿದ ಆಸ್ತಿ ಎಂದು ಹಲವರು ವಿವಾದ ಎಬ್ಬಿಸುತ್ತಿರುವುದು ಸರಿಯಲ್ಲ. ಇದು ಭೋವಿ ದಲಿತ ಸಮುದಾಯಕ್ಕೆ ಸೇರಿದ ತಮ್ಮ ಕುಟುಂಬದ ಆಸ್ತಿಯಾಗಿದೆ ಎಂದು ಸುರೇಶ್ ಹಾಗೂ ಆರ್. ಮಹದೇವ ಸ್ಪಷ್ಟ ಪಡಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಚೆಗೆ ಕೆಲವರು ಈ ಜಾಗ ಕುರಿತು ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಾರೆ. ಈ ಆಸ್ತಿ ಎಸ್ಸಿ ಸಮುದಾಯಕ್ಕೆ ಸೇರಿದ ತಮ್ಮ ತಂದೆ ರಾಮಯ್ಯ ಅವರದ್ದಾಗಿದೆ. 1963 ರಲ್ಲಿ ದರಖಾಸ್ತು ಮತ್ತು ಪ್ರತ್ಯೇಕ ಪೋಡಿ ಸಹಾ ಆಗಿದೆ. ಆರ್‌ಟಿಸಿ ಸಹಾ ಮಾಡಲಾಗಿದೆ. ಇದು ಬಳಿಕ ಪಾಲಿಕೆ ವ್ಯಾಪ್ತಿಗೆ ಬಂದಾಗ ತಮ್ಮ ತಂದೆ ರಾಮಯ್ಯ ಅವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ನಿಯಮಿತವಾಗಿ ತೆರಿಗೆ ಸಹಾ ಕಟ್ಟಿದ್ದಾರೆ ಎಂದು ವಿವರಿಸಿದರು.

ಆದರೆ ಈ ಅಮೂಲ್ಯ ಆಸ್ತಿ ಕಬಳಿಸಲು ಕೆಲವರು ಯತ್ನಿಸಿದ ಕಾರಣ ಪೌತಿ ಖಾತೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಈ ಕುರಿತ ವಿಚಾರಣೆ ಪಾಲಿಕೆ ಆಯುಕ್ತರ ನ್ಯಾಯಾಲಯದಲ್ಲಿದ್ದು, ಅಂತಿಮ ತೀರ್ಪು ಬಾಕಿ ಇದೆ. ಹೀಗಿದ್ದರೂ ಈಗ ಕೆಲವರು ವಿವಾದ ಎಬ್ಬಿಸುತ್ತಿದ್ದಾರೆ. ಆದ್ದರಿಂದ ಮಧ್ಯವರ್ತಿಗಳು, ಖರೀದಿಗೆ ಮುಂದಾಗುವ ಇತರರು ಎಚ್ಚರದಿಂದಿರಬೇಕೆಂದು ಕೋರಿದರು.

ಕನ್ನಡಪರ ಹೋರಾಟಗಾರ ಬಾಲಕೃಷ್ಣ, ವಿನೋದ್‌ಕುಮಾರ್, ರವಿಶಂಕರ್ ಹಾಗೂ ಪುರುಷೋತ್ತಮ್ ಹಾಜರಿದ್ದರು.

ವರ್ತಮಾನ
ಜನಸಾಮಾನ್ಯರಿಗೆ ಉತ್ತಮ ಮಾಧ್ಯಮ

ಅವೈಜ್ಞಾನಿಕ ಚರಂಡಿ ನಿರ್ಮಾಣ

ಚಾಮರಾಜನಗರ: ನಗರಸಭೆಯ 14ನೇ ವಾರ್ಡಿನ ವ್ಯಾಪ್ತಿಯ ಸಾರಿಗೆ ಬಸ್ ನಿಲ್ದಾಣದ ಹತ್ತಿರ ಮಯೂರ ಹೊಟೇಲ್ ಹಿಂಭಾಗದ ರಸ್ತೆಯಲ್ಲಿ ಅವೈಜ್ಞಾನಿಕ ಚರಂಡಿ ನಿರ್ಮಾಣ ಮತ್ತು ಚರಂಡಿಯನ್ನು ಒತ್ತುವರಿ ಮಾಡಿಕೊಂಡಿರುವ ಪರಿಣಾಮ ಅಲ್ಲಿನ ನಿವಾಸಿಗಳು ತೊಂದರೆ ಅನುಭಿಸುವಂತಾಗಿದೆ.

ನಗರದ ಪ್ರಮುಖ ರಸ್ತೆಗಳಲ್ಲಿ ಒಂದಾಗಿರುವ ಸದಾ ಜನನಿಬಿಡ ಪ್ರದೇಶವಾಗಿದ್ದು. ಡಯಟ್ ಕಾಲೇಜು ಮಾರ್ಗದ ರಸ್ತೆ ಬದಿಯಲ್ಲಿ ಚರಂಡಿ ನಿರ್ಮಾಣ ಮಾಡಲಾಗಿದೆ. ಈ ಚರಂಡಿ ನೀರು ಸಮರ್ಪಕವಾಗಿ ಹರಿಯುತ್ತಿಲ್ಲ. ಜೊತೆಗೆ ಚರಂಡಿ ಒತ್ತುವರಿ ಮಾಡಿಕೊಂಡಿರುವ ಪರಿಣಾಮ ಮನೆ ಹಾಗೂ ಅಂಗಡಿಗಳಿಂದ ಬರುವ ಕಲುಷಿತ ನೀರಿಗೆ ತಡೆಯಾಗಿದೆ. ಇದು ಮುಂದೆ ಹೋಗಲು ಪೌರಕಾರ್ಮಿಕರು ಎಷ್ಟೇ ಪ್ರಯತ್ನ ಮಾಡಿದರು ಸಹ ಪ್ರಯೋಜವಾಗಿಲ್ಲ. ಅನೇಕ ಬಾರಿ ನಿವಾಸಿಗಳು ನಗರಸಭೆ ದೂರು ನೀಡಿದರು ಯಾವುದೇ ಪ್ರಯೋಜನವಾಗಿಲ್ಲ.

ಇನ್ನು ಚರಂಡಿಯನ್ನು ಕಾಟಚಾರಕ್ಕೆ ಎಂಬಂತೆ ನಿರ್ಮಾಣ ಮಾಡಿದ್ದು, ಮಯೂರು ಹೊಟೇಲ್ ಹಿಂಭಾಗದ ಈ ಚರಂಡಿ ನೀರು ಸರಾಗವಾಗಿ ಹೋಗುವಂತೆ ಮಾಡದೇ. ಅಲ್ಲಿಯೇ ನಿಲ್ಲುವಂತಾಗಿದೆ. ಸುಮಾರು 2 ಅಡಿ ಅಳದವರೆಗೆ ಕಲುಷಿತ ನೀರು ಮಳೆ ನೀರು ಸೇರಿ, ದುರ್ವಾಸನೆಯ ಜೊತೆಗೆ ಸೊಳ್ಳೆ ಹೆಚ್ಚಾಗಿದ್ದು, ಸಾಂಗ್ರಾಮಿಕ ರೋಗ ಹರಡುವ ಭೀತಿಯಲ್ಲಿದೆ. ಹೀಗಾಗಿ ನಗರಸಭೆಯ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ, ನಿವಾಸಿಗಳಿಗೆ ಅನುಕೂಲ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

- ಚರಂಡಿ ಒತ್ತುವರಿಯಿಂದ ಕುಲುಷಿತ ನೀರು ಸಂಗ್ರಹ
- ಸಾಂಕ್ರಾಮಿಕ ರೋಗ ಹರಡುವ ಭೀತಿ

ನಶೆಮುಕ್ತ ಮೈಸೂರಿಗೆ ಆಗ್ರಹ

ಮೈಸೂರು: ಕರ್ನಾಟಕ ಕನ್ನಡ ಸಂಘಟನೆಗಳ ಒಕ್ಕೂಟವು ನಶೆಮುಕ್ತ ಮೈಸೂರು ಅಭಿಯಾನದ ಭಾಗವಾಗಿ ಧರಣಿ ಸತ್ಯಾಗ್ರಹವನ್ನು ನಡೆಸಿತು.

ನಗರದ ಅಗ್ರಹಾರ ವೃತ್ತದಲ್ಲಿ ಪ್ರತಿಭಟಿಸಿದ 50ಕ್ಕೂ ಹೆಚ್ಚು ಮಂದಿ ಆರೋಗ್ಯಕರ ಮತ್ತು ಮಾದಕ ದ್ರವ್ಯಮುಕ್ತ ಜೀವನಶೈಲಿಯನ್ನು 'ಉತ್ತೇಜಿಸುವ ನಮ್ಮ ನಿರಂತರ ಪ್ರಯತ್ನಗಳ ಭಾಗವಾಗಿ ಅಭಿಯಾನ ಕೈಗೊಂಡರು. ಈ ವೇಳೆ ಮಾದಕ ದ್ರವ್ಯಗಳನ್ನು ಬೇರು ಸಮೇತಕಿತ್ತು ಹಾಕಬೇಕೆಂದು ಮತ್ತು ಮಾದಕ ವಸ್ತುಗಳನ್ನು ಉತ್ಪಾದನೆಗಳನ್ನು ಮಾಡುವವರ ಹಾಗೂ ಕೊಳ್ಳುವವರು ವಿರುದ್ಧ ಸರ್ಕಾರ ಕಠಿಣ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು

ಮಾದಕ ದುರುಪಯೋಗದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ವ್ಯಾಸನ ಮುಕ್ತ ಜೀವನವನ್ನು ನಡೆಸಲು ಯುವಕರನ್ನು ಪ್ರೇರೇಪಿಸುವ ಕೆಲಸ ಆಗಬೇಕಿದೆ ಎಂದರು. ಇದೇ ವೇಳೆ ಪ್ರತಿಭಟನೆಯಲ್ಲಿ ಮಾದಕ ವಸ್ತುಗಳ ಪೂರೈಕೆ ಹಾಗೂ ಬಳಕೆ ವಿರುದ್ಧ ವಿವಿಧ ಭಿತ್ತಿ ಚಿತ್ರಗಳ ಪ್ರದರ್ಶನದ ಜಾಗೃತಿಮೂಡಿಸಲಾಯಿತು. ಕನ್ನಡ ಕ್ರಾಂತಿಧಳ ರಾಜ್ಯಾಧ್ಯಕ್ಷ ತೇಜಸ್ವಿ ನಾಗಲಿಂಗಸ್ವಾಮಿ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಡಾ.ಎಂ. ಲಿಂಗರಾಜು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲ, ಶ್ರೀರಾಂಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಕಮಲಾ ನಟರಾಜು, ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಕೋದಂಡರಾಮು, ಜಿಲ್ಲಾ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ರೂಪಾಂತರ ನಾಟಕಕ್ಕೆ ಮಾರು ಹೋದ ಪ್ರೇಕ್ಷಕರು

ಮೈಸೂರು: ರಂಗಾಯಣದ ಎರಡನೇ ದಿನದಂದು ಬಹು ಆಕರ್ಷಿತವಾಗಿ ರೂಪಾಂತರ ನಾಟಕ ವೀಕ್ಷಿಸಲು ನಟ ಪ್ರಕಾಶ್ ರಾಜ್ ಸೇರಿ ಅನೇಕರು ಆಗಮಿಸಿ ಗಮನ ಸೆಳೆದರು.



ಬಹುರೂಪಿಯ ಎರಡನೇ ದಿನದಂದು ಸಂವಿಧಾನ ಮೇಕಿಂಗ್ ಆಫ್ ದಿ ಇಂಡಿಯನ್ ಕಾನ್ಸ್ಟಿಟ್ಯೂಷನ್, ಜೈ ಭೀಮ್ ಕಾಮ್ರೇಡ್ ಪಾರ್ಟ 1, ಮಾರಿ ಕೊಂಡವರು ಸಿನಿಮಾಗಳಿಗೂ ಜನ ಸಮೂಹ ನೆರೆದಿತ್ತು. ಮಾರಿಕೊಂಡವರು ಚಿತ್ರದ ನಿರ್ದೇಶಕ ಕೆ.ಶಿವರುದ್ರಯ್ಯ ಸೇರಿ ಅನೇಕರು ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಭೂಮಿಗೀತ ಎದುರಿನ ಕುಟೀರದಲ್ಲಿ 10 ಕ್ಕೂ ಹೆಚ್ಚುಕಲಾ ಚಿತ್ರ ಕಲೆಗಳ ಮೂಲಕ ಬಣ್ಣಗಳಲ್ಲಿ ಭೀಮಾಯಾನ ಎಂಬ ಆಶಯದಡಿ ಪ್ರಸ್ತುತ ಪಡಿಸಿದ ಅಂಬೇಡ್ಕರ್ ಚಿತ್ರಗಳು ಜನರ ಗಮನ ಸೆಳೆದವು.

ಕುಟುಂಬದೊಂದಿಗೆ ನಾಟಕ ವೀಕ್ಷಣೆ

ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಕಲಾಮಂದಿರದಲ್ಲಿ ಪ್ರದರ್ಶನ ಕಂಡ ?ರೂಪಾಂತರ? ನಾಟಕವನ್ನು ಪಂಚಭಾಷಾ ನಟ ಪ್ರಕಾಶ್ ರಾಜ್ ಕುಟುಂಬ ಸಮೇತರಾಗಿ ವೀಕ್ಷಿಸಿದರು.ರೂಪಾಂತರ ನಾಟಕವು ಶಾಲಾ ರಂಗ ವಿಕಾಸ ಯೋಜನೆಯಡಿ ತಯಾ ರಾದ ನಾಟಕವಾಗಿದ್ದು, ಕಲಿಯುವ ಮನೆ ಶಾಲೆಯ ವಿದ್ಯಾರ್ಥಿಗಳಿಂದ ರಚಿಸಲ್ಪಟ್ಟು, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಪ್ರದರ್ಶನ ಗೊಳ್ಳುತ್ತಿದೆ. ಬಾದಲ್ ಸರ್ಕಾರ್ ಅವರ ನಾಟಕದ ರೂಪಾಂತರವಾಗಿದ್ದು ಸಮತೆಯ ಸಂದೇಶವನ್ನು ಸಾರುತ್ತಿದೆ. ಸಂಜೆ ಕಲಾಮಂದಿರಕ್ಕೆ ಆಗಮಿಸಿದ ನಟ ಪ್ರಕಾಶ್ ರಾಜ್ , ಪತ್ನಿ ಪೋನಿ ವರ್ಮ ಮತ್ತು ಪುತ್ರನ ಜತೆ ಮಕ್ಕಳ ನಡುವೆ ಕುಳಿತು ನಾಟಕ ವೀಕ್ಷಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದಿಂದ ಪೊಲೀಸ್ ಇಲಾಖೆಗೆ ಬ್ಯಾರಿಕೇಡ್‌ಗಳ ಕೊಡುಗೆ

ರಾಮನಗರ: ನಗರದಲ್ಲಿ ಹೆಚ್ಚಾಗುತ್ತಿರುವ ವಾಹನ ಸಂಚಾರ ದಟ್ಟಣೆಯ ನಿಯಂತ್ರಣಕ್ಕೆ ಅನುಕೂಲವಾಗುವಂತೆ ಬ್ಯಾರಿಕೇಡ್‌ಗಳನ್ನು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಪರವಾಗಿ ಶಾಸಕ ಇಕ್ಬಾಲ್ ಹುಸೇನ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹಸ್ತಾಂತರಿಸಿದರು.

ನಗರದಲ್ಲಿರುವ ಪ್ರಾಧಿಕಾರದ ಕಚೇರಿ ಆವರಣದಲ್ಲಿ ಬ್ಯಾರಿಕೇಡ್‌ಗಳನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿದ ವೇಳೆ ಮಾತನಾಡಿದ ಶಾಸಕ ಇಕ್ಬಾಲ್ ಹುಸೇನ್, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬ್ಯಾರಿಕೇಡ್‌ಗಳನ್ನು ಪೋಲೀಸ್ ಇಲಾಖೆಗೆ ನೀಡುತ್ತಿರುವ ಪ್ರಾಧಿಕಾರದ ಕ್ರಮ ಶ್ಲಾಘನೀಯ ಎಂದರು. ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಅವರ ಈ ಕಾರ್ಯ ಸಮಾಜಮುಖಿಯಾಗಿದೆ ಎಂದು ಮೆಚ್ಚುಗೆಯ ನುಡಿಗಳನ್ನು ಆಡಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್‌ಕುಮಾರ್ ಮಾತನಾಡಿ, ಸುಮಾರು 15 ಲಕ್ಷ ರೂ ವೆಚ್ಚದಲ್ಲಿ ಪೋಲೀಸ್ ಇಲಾಖೆಗೆ 100 ಬ್ಯಾರಿಕೇಡ್‌ಗಳು, ರೇ?ಮ್ ಮಾರುಕಟ್ಟೆಗೆ 30 ಹಾಗೂ ಪಟ್ಟಣದ ಪ್ರಮುಖ ದೇವಾಲಯಗಳಿಗೆ 20 ಸೇರಿ ಒಟ್ಟು 150 ಬ್ಯಾರಿಕೇಡ್‌ಗಳನ್ನು ವಿತರಣೆ ಮಾಡಲಾಗುತ್ತಿದೆ. ಇದಕ್ಕೆ ಶಾಸಕ ಇಕ್ಬಾಲ್ ಹುಸೇನ್ ಅವರ ಮಾರ್ಗದರ್ಶನವಿದೆ ಎಂದರು.

ಬ್ಯಾರಿಕೇಡ್‌ಗಳಲ್ಲಿ ವಾಹನ ಚಾಲಕರು, ನಾಗರೀಕರಿಗೆ ಸಂದೇಶಗಳನ್ನು ನೀಡಲಾಗಿದೆ. ಸಂಚಾರ ನಿಯಮ ಪಾಲಿಸಿ, ಹೆಲ್ಮೆಟ್ ಧರಿಸಿ ಮುಂತಾದ ನಿಯಮಗಳು, ಕಾಳಜಿಯ ಸಂದೇಶಗಳನ್ನು ಬರೆಯಲಾಗಿದೆ ಎಂದರು.

ಗ್ಯಾರಂಟಿ ಯೋಜನೆಗಳ ಅನು?ಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ವೃತ್ತ ಆರಕ್ಷಕ ನಿರೀಕ್ಷಕ ಕೃ?, ಇನ್ಸ್ಪೆಕ್ಟರ್ ತನ್ವೀರ್, ಎಎಸ್‌ಐ ದೇವುಕುಮಾರ್, ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿಎನ್‌ಆರ್ ವೆಂಕಟೇಶ್, ನಗರಸಭೆ ಪೌರಾಯುಕ್ತ ಡಾ.ಜಯಣ್ಣ, ನಗರಸಭೆ ಸದಸ್ಯ ಬೈರೇಗೌಡ, ಮುಖಂಡ ?ಡಕ್ಷರಿದೇವ, ಭಗರ್‌ಹುಕ್ಕುಂ ಸಾಗುವಳಿ ಸಮಿತಿ ಸದಸ್ಯ ರವಿ ಸೇರಿದಂತೆ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿಗೆ ಸಮಗ್ರ ಪ್ರಶಸ್ತಿ

ಚಾಮರಾಜನಗರ, ಮೈಸೂರಿನ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿವತಿಯಿಂದ ಮೈಸೂರಿನ ಚಾಮುಂಡೇಶ್ವರಿ ಒಳ ಕ್ರೀಡಾಂಗಣದಲ್ಲಿ ನಡೆದ 20 ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ನಗರದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆ ಪಟುಗಳು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿ ಉತ್ತಮ ಪ್ರದರ್ಶನ ನೀಡಿ ವಿಜೇತರಾಗಿ ಬಹುಮಾನಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕತಾ ಮತ್ತು ಕುಮಿತೆಯ ವಿವಿಧ ವಿಭಾಗಗಳಲ್ಲಿ 17 ಪ್ರಥಮ ಸ್ಥಾನ, 14 ದ್ವಿತೀಯ ಸ್ಥಾ, 21 ತೃತೀಯ ಸ್ಥಾನಗಳನ್ನು ಪಡೆದು ಓವರ್ ಆಲ್ ಚಾಂಪಿಯನ್ ಶಿಪ್ ಟ್ರೋಫಿ ಮುಡಿ ಗೇರಿಸಿಕೊಂಡಿದ್ದಾರೆ.

ಅಭಿನಂದನೆ

ವಿಜೇತ ಕರಾಟೆ ಪಟುಗಳನ್ನು ಮುಖ್ಯ ಕರಾಟೆ ತರಬೇತುದಾರರು ಹಾಗೂ ವಕೀಲರಾದ ಸೆನ್ಸಾಯ್ ರಾಜೇಂದ್ರ, ತರಬೇತುದಾರರಾದ ಸೆನ್ಸಾಯ್ಗಳಾದ ಯೋಗೀಶ್, ರಮೇಶ್, ಅಬ್ದುಲ್ ಫೈಸಲ್, ಶೇಖರ್ ಅಭಿನಂದಿಸಿದ್ದಾರೆ.

ಚಾಮರಾಜನಗರ: ಗಮನ ಸೆಳೆದ ರಂಗೋಲಿ ಸ್ಪರ್ಧೆ

ಚಾಮರಾಜನಗರ, ನಮ್ಮ ಸೊಗಡು, ಸಂಸ್ಕೃತಿಯನ್ನು ಉಳಿಸುವಲ್ಲಿ ರಂಗೋಲಿ ಸ್ಪರ್ಧೆ ಪ್ರಮುಖ ಪಾತ್ರವಹಿಸಲಿದೆ ಎಂದು ಮುಖಂಡ ದಲಿತರಾಜ್ ಅಭಿಪ್ರಾಯಪಟ್ಟರು.

ನಗರದ ಇಮ್ಮಾನುವೇಲ್ ಕ್ರಿಶ್ಚಿಯನ್ ಪಬ್ಲಿಕ್ ಶಾಲೆಯಲ್ಲಿ ಪೋಷಕರಿಗೆ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ವಿಜೇತ ರಿಗೆ ಬಹುಮಾನ ವಿತರಿಸಿ ಮಾತನಾಡಿದರು. ಇಮ್ಮಾನುವೇಲ್ ಕ್ರಿಶ್ಚಿಯನ್ ಪಬ್ಲಿಕ್ ಶಾಲೆಯು ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಪಠ್ಯೇತರ ಚಟುವಟಿಕೆಗಳು ಆಯೋಜಿಸಿಕೊಂಡು ಬರುತ್ತಿದ್ದು ಅಲ್ಲದೆ ಪೋಷಕರಿಗಾಗಿ ರಂಗೋಲಿ ಸ್ಪರ್ಧೆ ಅಯೋಜಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಪೋಷಕರ ಸ್ನೇಹಿ ಶಾಲೆ:ಕಾರ್ಯಕ್ರಮ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಆರ್ ಪಿ ಶಿವಕುಮಾರ್ ಮಾತನಾಡಿ, ಇಮ್ಮಾನುವೇಲ್ ಕ್ರಿಶ್ಚಿಯನ್ ಪಬ್ಲಿಕ್ ಶಾಲೆಯು ಡೊನೇಷನ್ ತೆಗೆದುಕೊಳ್ಳದೆ ಶಿಕ್ಷಣ ಇಲಾಖೆಯ ಮಾರ್ಗಸೂಚಿಗಳನ್ವಯ ಪ್ರವೇಶ ಶುಲ್ಕ ವನ್ನು ಪಡೆದು ಗಡಿಜಿಲ್ಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡುವ ಕೆಲಸ ಮಾಡುವುದರೊಂದಿಗೆ ಪೋಷಕರಿಗೂ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಪೋಷಕರ ಸ್ನೇಹಿ ಶಾಲೆಯಾಗಿ ನಡೆಯುತ್ತಿದೆ ಎಂದರು.

ಶಾಲೆಯ ಮುಖ್ಯಸ್ಥೆ ಜೋಸ್ನಾ ಅಂಥೋಣಿ ಮಾತನಾಡಿ, ಜಿಲ್ಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡಲು ಶಾಲೆ ಆರಂಭಿಸಲಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳು, ಪೋಷಕರಲ್ಲಿ ಸಾಹಿತ್ಯ, ಸಂಸ್ಕೃತಿ ಬಗ್ಗೆ ಅರಿವು ಮೂಡಿಸುವ ಸದುದ್ದೇಶದಿಂದ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಫಾಸ್ಟರ್ ಅನಿಲ್ ಕು

ಯುವ ದಿನಾಚರಣೆ : ವಿವೇಕಾನಂದರ ಆದರ್ಶ ಪಾಲನೆಗೆ ಕರೆ

ಕೆ. ಆರ್. ಪೇಟೆ: ಪಟ್ಟಣದ ಪ್ರಗತಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ಇಂದು ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಸ್ವಾಮಿ ವಿವೇಕಾನಂದ ಧ್ಯಾನ ಕೇಂದ್ರದ ಮುಖ್ಯಸ್ಥರಾದ ಆನಂದ್ ಉದ್ಘಾಟಿಸಿ ಮಾತನಾಡಿದರು. ಸ್ವಾಮಿ ವಿವೇಕಾನಂದರು ಯುವಕರಿಗೆ ಹಲವು ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ ಅವುಗಳನ್ನು ಅನುಸರಿಸುವುದರ ಮೂಲಕ ಉತ್ತಮ ಸಂಸ್ಕಾರ ರಾಷ್ಟ್ರಭಕ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಇಂದಿನ ಯುವಕರು ಸ್ವಾಮಿ ವಿವೇಕಾನಂದರ ವಿವರವನ್ನು ಅಭ್ಯಾಸ ಮಾಡಬೇಕು ಅವರು ಅನುಸರಿಸಿದ ಮಾರ್ಗಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳು ಇಂದು ಪ್ರಸ್ತುತವಾಗಿವೆ. ರಾಷ್ಟ್ರೀಯ ಧಾರ್ಮಿಕ ಭಾವೈಕ್ಯತೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚುರ ಪಡಿಸಿದ ಮಹಾನ್ ಪುರುಷ. ಯುವಕರು ಸ್ವಾಮಿ ವಿವೇಕಾನಂದ ಅವರ ನಡೆ ನುಡಿಯನ್ನು ಆದರ್ಶಗಳನ್ನು ಅನುಸರಿಸುವುದರ ಮೂಲಕ ಉತ್ತಮ ವ್ಯಕ್ತಿಗಳಾಗಲು ಸಾಧ್ಯವಾಗುತ್ತದೆ ಎಂದು ಆನಂದ್ ಹೇಳಿದರು ಕೃಷ್ಣರಾಜ ಪದವಿ ಪೂರ್ವ ಕಾಲೇಜಿನ ಆಡಳಿತ ಅಧಿಕಾರಿ ಎಸ್ಪಿ ಲೋಕೇಶ್ ಮಾತನಾಡಿ ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ಮಾಡಿದ ಬಸವ ಇಡೀ ಜಗತ್ತನ್ನು ಹೊರಡು ಮಾಡಿತು ಧಾರ್ಮಿಕ ಆಚರಣೆಗಳ ಮೂಲಕ ಉನ್ನತ ಆದರ್ಶಗಳನ್ನು ಬೆಳೆಸಿಕೊಳ್ಳಬಹುದು ಮಾನವೀಯ ಮೌಲ್ಯಗಳ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಬಹುದು ಈ ದಿಕ್ಕಿನಲ್ಲಿ ವಿದ್ಯಾರ್ಥಿಗಳು ಯುವಕರು ಸಾಗಬೇಕು ಎಂದು ಅವರು ಹೇಳಿದರು ಲೇಖಕ ಕೆ ಕಾಳೇಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಜಗತ್ತಿಗೇ ಪಸರಿಸಿದ ಅದಮ್ಯ ಚೇತನ ಸ್ವಾಮಿ ವಿವೇಕಾನಂದರು. ಯುವ ಮನಸ್ಸುಗಳ ಪ್ರೇರಣಾ ಶಕ್ತಿಯಾದ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಗುತ್ತದೆ.

ಪ್ರಖರ ಮಾತುಗಳಿಂದ ವಿಶ್ವವನ್ನೇ ಬೆರಗುಗೊಳಿಸಿದ ಸಿಡಿಲಸಂತ ಸ್ವಾಮಿ ವಿವೇಕಾನಂದ ಅವರ ಜನ್ಮದಿನದಂದು ಶತ ಶತ ನಮನಗಳು ಎಂದು ಅವರು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ಎಚ್ ಆರ್ ಗೋಪಾಲಕೃಷ್ಣ ಮುಖ್ಯ ಶಿಕ್ಷಕಿ ನಂದಿನಿ ಶಿಕ್ಷಕ ಸಬೀನಾ ಮುಂತಾದವರು ಭಾಗವಹಿಸಿದ್ದರು ವಿದ್ಯಾರ್ಥಿ ಮಹಾಲಕ್ಷ್ಮಿ ಸ್ವಾಗತಿಸಿದರು. ವರಲಕ್ಷ್ಮಿ ಮತ್ತು ನಿತ್ಯಶ್ರೀ ಕಾರ್ಯಕ್ರಮ ನಿರೂಪಿಸಿದರು. ವರ್ಷ ವಂದಾನಾರ್ಪಣೆ ಮಾಡಿದರು. ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ಶಾಲೆಯಿಂದ ಹೊರಗುಳಿದ ಮಕ್ಕಳ ಮೇಲೆ ನಿಗಾ ವಹಿಸಿ

ಮಂಡ್ಯ: ಶಾಲೆಯಿಂದ ಹೊರಗುಳಿದ ಹದಿಹರೆಯದ ಮಕ್ಕಳ ಮೇಲೆ ಶಾಲೆ ಮುಖ್ಯೋಪಾಧ್ಯಾಯರು ನಿಗಾ ವಹಿಸಿ ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಅವರು ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿದ್ದ ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರಾಜ್ಯದಲ್ಲಿ 13 ಹೆಚ್ಚು ಬಾಲ ಗರ್ಭಿಣಿಯರ ಪ್ರಕರಣ ದಾಖಲಾಗಿದೆ. ಬಾಲ ಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟುವುದ ಕೇವಲ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜವಾಬ್ದಾರಿ ಅಲ್ಲ ಎಲ್ಲಾ ಇಲಾಖೆಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಶಾಲೆಯಿಂದ ಯಾವುದೇ ಹೆಣ್ಣು ಮಗು ಹೊರಗುಳಿದರು ಅವರ ಮನೆಗಳಿಗೆ ಶೀಘ್ರವೇ ಭೇಟಿ ಪರಿಶೀಲನೆ ನಡೆಸಿ. ವಸತಿ ಶಾಲೆಗಳಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಲು ಬರುವ ಪಾಲಕರನ್ನು ಪರಿಶೀಲಿಸಿ. ವಸತಿ ಶಾಲೆಗೆ ವಿದ್ಯಾರ್ಥಿನಿಯರು ದಾಖಲಾಗುವ ಸಂದರ್ಭದಲ್ಲಿ ವಿದ್ಯಾರ್ಥಿಯ ತಂದೆ ತಾಯಿ ಮತ್ತು ಸಹೋದರರ ದೂರವಾಣಿ ಸಂಖ್ಯೆ ಮತ್ತು ಭಾವಚಿತ್ರಗಳನ್ನು ಪಡೆಯಿರಿ. ತಂದೆ ತಾಯಿ ಮತ್ತು ಸಹೋದರರನ್ನು ಹೊರತುಪಡಿಸಿ ಯಾರೇ ಬಂದರೂ ವಿದ್ಯಾರ್ಥಿಯನ್ನು ಕಳಿಸಬೇಡಿ ಎಂದು ಹೇಳಿದರು.

ಈ ವರ್ಷ ಜಿಲ್ಲೆಯಲ್ಲಿ 17 ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ. ಬಾಲಕಾರ್ಮಿಕರನ್ನು ಪತ್ತೆ ಹಚ್ಚುವುದರ ಜೊತೆಗೆ ಅವರಿಗೆ ಆಶ್ರಯ ನೀಡಬೇಕು. ತಂದೆ ತಾಯಿ ಇಲ್ಲದ ಅರ್ಹ ಮಕ್ಕಳಿಗೆ ಪದವಿಯವರೆಗೆ ವಿದ್ಯಾಭ್ಯಾಸವನ್ನು ಕರ್ನಾಟಕ ಬಾಲವಿಕಾಸ ಅಕಾಡೆಮಿ ನೋಡಿಕೊಳ್ಳುತ್ತದೆ. ಶಾಲೆಗಳ 200 ಮೀ ವ್ಯಾಪ್ತಿಯಲ್ಲಿ ತಂಬಾಕು ಮಾರಾಟವಾಗದಂತೆ ಕ್ರಮ ವಹಿಸಿ ಎಂದು ಹೇಳಿದರು.

ಪ್ರತಿಭೆ ಅನಾವರಣಗೊಂಡಾಗ ಮಾತ್ರ ಸಾಧನೆ ಸಾಧ್ಯ: ಶಾಸಕ ರವಿಕುಮಾರ್

ಮಂಡ್ಯ: ಮಕ್ಕಳು ತಮ್ಮಲ್ಲಿ ಇರುವ ಪ್ರತಿಭೆಯನ್ನು ಅನಾವರಣಗೊಳಿಸಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಅವರು ಹೇಳಿದರು.

ಮಂಡ್ಯ ನಗರದ ಸಂತ ಜೋಸೆಫರ ಪ್ರೌಢಶಾಲೆ ಆವರಣದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮಂಡ್ಯ ಶಾಲಾ ಶಿಕ್ಷಣ ಇಲಾಖೆ ಮಂಡ್ಯ ವತಿಯಿಂದ ಆಯೋಜಿಸಲಾಗಿದ್ದ 2025–26 ನೇ ಸಾಲಿನ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳು ಕೇವಲ ಪಠ್ಯ ಪುಸ್ತಕಗಳಿಗೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಮಕ್ಕಳು ಐ ಎ ಎಸ್, ಐ.ಟಿ ಎಫ್ ನಂತಹ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಜನ ಸೇವಕರಾಗಿ ರಾಜಕೀಯ ಪ್ರವೇಶ ಮಾಡಬೇಕು. ಭಾರತ ಯುವ ಪೀಳಿಗೆಯ ಮೇಲೆ ನಿಂತಿದೆ. ಮಕ್ಕಳು ದೊಡ್ಡ ಕನಸುಗಳನ್ನು ಕಾಣಬೇಕು ಮತ್ತು ಕನಸನ್ನು ನನಸಾಗಿಸಲು ಶ್ರಮ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ ಕುಮಾರ ಅವರು ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಅವರ ಪ್ರತಿಭೆಯನ್ನು ಅನಾವರಣಗೊಳಿಸಲು ಸೂಕ್ತ ವೇದಿಕೆ ದೊರೆಯಬೇಕು. ಪ್ರತಿಯೊಂದು ಮಗುವಿನಲ್ಲೂ ವಿಶೇಷ ಪ್ರತಿಭೆ ಅಡಕವಾಗಿರುತ್ತದೆ. ಅಂತಹ ಮಕ್ಕಳಿಗೆ ಸೂಕ್ತ ವೇದಿಕೆ ಸಿಗದಿದ್ದರೆ ಅವರ ಪ್ರತಿಭೆ ಕಮರಿ ಹೋಗುತ್ತದೆ ಹಾಗಾಗಿ ಮಕ್ಕಳಿಗೆ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಪ್ರತಿಭಾ ಕಾರಂಜಿ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಅನಾವರಣಗೊಳಿಸಲು ಸೂಕ್ತ ವೇದಿಕೆಯಾಗಿದೆ. ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ. ಶಿಕ್ಷಕರು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಪಠ್ಯದಷ್ಟೆ ಪಠ್ಯೇತರ ಚಟುವಟಿಕೆಗಳು ಮುಖ್ಯ ಮಕ್ಕಳಿಗೆ ಜೀವನದ ಮೌಲ್ಯಗಳ ಕುರಿತು ಶಿಕ್ಷಕರು ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಕಳೆದ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಜಿಲ್ಲೆಯ ವಿದ್ಯಾರ್ಥಿಗಳು ಕಾಪಾಡಿಕೊಂಡಿದ್ದಾರೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಕೆ.ಆರ್ ನಂದಿನಿ ಅವರು ಮಾತನಾಡಿ ಪ್ರತಿಭಾ ಕಾರಂಜಿ ವೈಯಕ್ತಿಕವಾಗಿ ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ. ಕಲಿಕಾ ದಿನಗಳಲ್ಲಿ ನಮ್ಮ ಶಾಲೆಯನ್ನು ಪ್ರತಿನಿಧಿಸಿ ವಿವಿಧ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೆ. ಪ್ರತಿಭೆಗಳ ಸಮ್ಮಿಲನ ಮತ್ತು ಅನಾವರಣಕ್ಕೆ ಪ್ರತಿಭಾ ಕಾರಂಜಿ ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ಮಕ್ಕಳಲ್ಲಿ ವಿವಿಧ ಪ್ರತಿಭೆಗಳು ಇರುತ್ತವೆ ಅದನ್ನು ಪ್ರತಿಭೆಯನ್ನು ಗುರುತಿಸುವ ಕೆಲಸವನ್ನು ಪೋಷಕರು ಮತ್ತು ಶಿಕ್ಷಕರು ಮಾಡಬೇಕು. ಮಕ್ಕಳಿಗೆ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ಮಕ್ಕಳ ಪ್ರತಿಭೆಯನ್ನು ಗುರುತಿಸಿದಾಗ ಮಾತ್ರ ಅವರು ಎತ್ತರಕ್ಕೆ ಬೆಳೆಯುತ್ತಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೆ.ನಾಗೇಶ್, ಜಿಲ್ಲಾ ಪ್ರಾಂಶುಪಾಲ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಜೆ.ವೈ .ಮಂಜುನಾಥ್, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷರಾದ ಪುಟ್ಟರಾಜಯ್ಯ, ಡಯಟ್ ಉಪ ನಿರ್ದೇಶಕರಾದ ಹೆಚ್.ಎನ್. ಯೋಗೇಶ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಜಿ.ಎ.ಲೋಕೇಶ್, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್, ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಟಿ.ಸೌಭಾಗ್ಯ ಸಂತ ಜೋಷೇಫರ ಶಾಲಾ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳು ಹಾಜರಿದ್ದರು.

ಅರಣ್ಯ ನಿವಾಸಿಗಳಿಗೆ ಸಣ್ಣ ಉದ್ಯಮಕ್ಕೆ ಉತ್ತೇಜನ

ಮಂಡ್ಯ: ಪರಿಶಿಷ್ಟ ಪಂಗಡ, ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಹಾಗೂ ಅರಣ್ಯವಾಸಿಗಳು ಪಾರಂಪರಿಕವಾಗಿ ಅರಣ್ಯದಲ್ಲಿ ವಾಸಿಸುತ್ತಿರುವ ಅರಣ್ಯ ವಾಸಿಗಳಿಗೆ ಸ್ವಾವಲಂಬಿಗಳಾಗುವ ದೃಷ್ಟಿಯಿಂದ ಅರಣ್ಯದಲ್ಲಿ ಬೆಳೆಯುವ ಕಿರು ಉತ್ಪನ್ನಗಳನ್ನು ತೆಗೆದು ಜೀವನೋಪಾಯಕ್ಕೆ ಅನುಕೂಲಕರ ಮಾಡಿಕೊಡುವುದು ಉತ್ತಮ. ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಅರಣ್ಯ ನಿವಾಸಿಗಳ ಜೀವನೋಪಾಯವನ್ನು ಸುಧಾರಿಸುವ ಉದ್ದೇಶದಿಂದ ಅರಣ್ಯ ಕಿರು ಉತ್ಪನ್ನಗಳ ಆಧಾರಿತ ಉದ್ಯಮಗಳಿಗೆ ಸರ್ಕಾರದಿಂದ ಉತ್ತೇಜನ ನೀಡಲಾಗುತ್ತಿದೆ.ಈ ಹಿನ್ನೆಲೆಯಲ್ಲಿ ಮಂಗಳವಾರ ಅನುಸೂಚಿತ ಪಂಗಡ ಮತ್ತು ಪಾರಂಪರಿಕ ಬುಡಕಟ್ಟು ಜಿಲ್ಲಾ ಸಮಿತಿ ಸಭೆಯನ್ನು ಕರೆಯಲಾಗಿತ್ತು.

ಅರಣ್ಯ ಕಿರು ಉತ್ಪನ್ನಗಳಾದ ಜೇನುತುಪ್ಪ, ಬೆಲ್ಲೆಕಾಯಿ, ಆಮ್ಲೆ, ಸೋಪು ಕಾಯಿ, ಲಕ್ಕಿ, ಔಷಧೀಯ ಸಸ್ಯಗಳು, ಹುಲ್ಲು, ಬಿದಿರು ಮುಂತಾದವುಗಳ ಸಂಗ್ರಹ, ಮೌಲ್ಯವರ್ಧನೆ, ಸಂಸ್ಕರಣೆ ಹಾಗೂ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಅರಣ್ಯ ನಿವಾಸಿಗಳಿಗೆ ಸ್ಥಿರ ಆದಾಯ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಕ್ರಮದಿಂದ ಅರಣ್ಯ ಸಂಪತ್ತಿನ ಸಂರಕ್ಷಣೆಯ ಜೊತೆಗೆ ಅರಣ್ಯ ನಿವಾಸಿಗಳ ಆರ್ಥಿಕ ಸ್ವಾವಲಂಬನೆ ಹೆಚ್ಚಾಗಲಿದೆ ಹಾಗೂ ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರಣ್ಯ ನಿವಾಸಿಗಳು ಈ ಯೋಜನೆಯ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ ಎಂದು ತಿಳಿಸಲಾಯಿತು.

ಸಭೆಯಲ್ಲಿ ಕೈಗೊಂಡ ನಿರ್ಣಯಗಳು:

1. ಸುಮಾರುವರ್ಷಗಳಿಂದಅರಣ್ಯದಮೇಲೆಅವಲಂಬಿತರರಾಗಿ ಅರಣ್ಯದ ಪ್ರದೇಶದಲ್ಲಿ ವಾಸಿಸುತ್ತಿರುವ ಅರಣ್ಯ ನಿವಾಸಿಗಳಿಗೆ ಅರಣ್ಯದಲ್ಲೇ ಸಿಗುವ ಕಿರುಉತ್ಪನ್ನಗಳನ್ನು ತೆಗೆಯಲು ನಿಯಮಗಳಲ್ಲಿ ಅವಕಾಶವಿರುವ ನಿಟ್ಟಿನಲ್ಲಿ ಈ ಬಗ್ಗೆ ಅವಕಾಶ ಮಾಡಿಕೊಡುವಲ್ಲಿ ನಿಯಮಾನುಸಾರ ಕ್ರಮವಹಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.
2. ಅನುಸೂಚಿತ ಪಂಗಡ ಮತ್ತು ಪಾರಂಪರಿಕ ಬುಡಕಟ್ಟು ಜನಾಂಗದವರು ಅರಣ್ಯದಲ್ಲಿ ವಾಸಿಸುತ್ತಿರುವ ಮಂದಿಗೆ ಅರಣ್ಯ ಹಕ್ಕು ಪತ್ರ ನೀಡಲು ಕಾಯ್ದೆಯ ನಿಯಮಗಳಲ್ಲಿ ಅವಕಾಶವಿರುವ ರೀತ್ಯಾ ಒಟ್ಟು85 ಮಂದಿಗೆ ಅರಣ್ಯ ಹಕ್ಕು ಪತ್ರ ವಿತರಣೆ ಮಾಡಲು ಜರೂರಾಗಿ ಕ್ರಮ ವಹಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.
3. 75 ವರ್ಷಗಳಿಂದ ಸಾಕ್ಷ್ಯಗಳು ಮತ್ತು ದಾಖಲೆಗಳು ಇಲ್ಲದೆ ಇರುವ ಪ್ರಕರಣಗಳಲ್ಲಿ ಪುನಃ ಗ್ರಾಮ ಅರಣ್ಯ ಸಮಿತಿ ಮತ್ತು ಉಪವಿಭಾಗದ ಅರಣ್ಯ ಸಮಿತಿಗಳಲ್ಲಿ ಪ್ರಕರಣಗಳನ್ನು ಮರುಪರಿಶೀಲಿಸುವಂತೆ ಸೂಚಿಸಲಾಯಿತು.

ಪಾರಂಪರಿಕ ಬುಡಕಟ್ಟು ಜನಾಂಗದವರು ಹಾಗೂ ಸೋಲಿಗ ಜನಾಂಗದವರು ಹಾಗೀ ಇತರೆ ಯಾವುದೇ ಜನಾಂಗದವರು ಅರಣ್ಯ ವಾಸಿಗಳಾಗಿದ್ದಲ್ಲಿ ಅವರಿಗೆ ಅರಣ್ಯದ ಕಿರು ಉತ್ಪನ್ನಗಳನ್ನು ತೆಗೆಯಲು ಅವಕಾಶ ನೀಡಿ ಸ್ವಾವಲಂಬಿಗಳಾಗಿ ಜೀವನ ಸಾಗಿಸುವಲ್ಲಿ ನೆರವು ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ವಾಹನ ಮಾಲೀಕರು ಮಧ್ಯವರ್ತಿಗಳಿಂದ ದೂರವಿರಲಿ: ವಸಂತ್ ಈಶ್ವರ್ ಚವ್ಹಾಣ್

ಸಾರಿಗೆ ಇಲಾಖೆ ಸೇವೆಗೆ ಆನ್‌ಲೈನ್ ಅವಲಂಭಿಸಿ

ಮೈಸೂರು: ವಾಹನದ ಮಾಲೀಕರು ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ನೀಡುವ ಸೇವೆಗಳಿಗಾಗಿ ಮಧ್ಯವರ್ತಿಗಳನ್ನು ಸಂಪರ್ಕಿಸದೆ ಆನ್‌ಲೈನ್ ಮೂಲಕ ಮನೆಯಲ್ಲಿ ಕುಳಿತು ಅರ್ಜಿಗಳನ್ನು ಸಲ್ಲಿಸಿ ನೇರವಾಗಿ ಸೇವೆಗಳನ್ನು ಪಡೆಯಬಹುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯಾದ ವಸಂತ್ ಈಶ್ವರ್ ಚವ್ಹಾಣ್ ಹೇಳಿದರು.

ಮೈಸೂರು ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಕಚೇರಿಯ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ ನೀಡಲು, ಇಂದು ಪಶ್ಚಿಮ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಇಲಾಖೆಯ ಆನ್‌ಲೈನ್ ಸೇವೆಯ ಬಗ್ಗೆ ಮಾಹಿತಿ ನೀಡಿದರು.

ಪ್ರತಿ ವರ್ಷದಂತೆ ಈ ವರ್ಷವು ಜನವರಿ ತಿಂಗಳನ್ನು ರಸ್ತೆ ಸುರಕ್ಷತಾ ಮಾಸಚರಣೆ ಆಚರಣೆ ಆಗಿ ಆಚರಿಸಲಾಗುತ್ತಿದೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಯುವ ಜನರಿಗೆ ಅತಿವೇಗದ ವಾಹನ ಚಾಲನೆ, ವೀಲಿಂಗ್, ಡ್ರಿಂಕ್ ಅಂಡ್ ಡ್ರೈವ್ ಗಳ ದುಷ್ಪರಿಣಾಮಗಳು ಹಾಗೂ ಕಾನೂನಿನ ಮೂಲಕ ವಿಧಿಸಬಹುದಾದ ಶಿಕ್ಷೆಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಕರ್ನಾಟಕ ರಾಜ್ಯದಲ್ಲಿ ರಸ್ತೆ ಅಪಘಾತದಿಂದ ಕಳೆದ ವರ್ಷ 28 ಸಾವಿರ ಸಾವು ನೋವುಗಳು ಉಂಟಾಗಿವೆ ಸಂಚಾರಿ ನಿಯಮ ಪಾಲನೆ ಮಾಡಿದರೆ ಬಹಳಷ್ಟು ಸಾವು ನೋವನ್ನು ತಡೆಗಟ್ಟಬಹುದು ಎಂದರು.

ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ಡಿ.ಎಲ್. ಹಾಗೂ ಎಲ್.ಎಲ್.ಆರ್ ಸೇರಿದಂತೆ 26 ಕ್ಕೂ ಹೆಚ್ಚಿನ ಸೇವೆಯನ್ನು ಆನ್‌ಲೈನ್ ಮೂಲಕ ನೀಡಲಾಗುತ್ತಿದೆ. ವಾಹನ ತಂತ್ರಾಂಶಕ್ಕೆ ಸೇವೆಗಳಾದ ವಾಹನ ವರ್ಗಾವಣೆ, ವಿಳಾಸ ಬದಲಾವಣೆ, ತೆರಿಗೆ ಪಾವತಿ, ಕರಾರು ಒಪ್ಪಂದ

ಸಂಕ್ರಾಂತಿ ಹಬ್ಬದ ವಿಶೇಷತೆ ತಿಳಿಸೋಣ ನಮ್ಮ ಮಕ್ಕಳಿಗೆ..



ಇತ್ತೀಚೆಗೆ ನಾವೆಲ್ಲರೂ ಕೇವಲ ಒಂದಿಷ್ಟು ಫೋಟೋ ಹಾಗೂ ತಿಂಡಿ ತಿನಿಸು ಅಂಗಡಿಗಳಿಂದ ತಂದು ಪ್ರತಿ ನಿತ್ಯಕ್ಕಿಂತ ಕೊಂಚ ಬದಲಾಗಿ ಪೂಜೆ ಮಾಡಿ ಹಬ್ಬದ ಫೋಟೋ ನಮ್ಮ ನಮ್ಮ ವಾಟ್ಸಾಪ್ ಇಲ್ಲಾ ಫೇಸ್ಬುಕ್ ಇಲ್ಲಾ ಇನ್ಸಾಗ್ರಾಮ್ ಅಕೌಂಟ್ ಗಳಲ್ಲಿ ಹಂಚಿಕೊಳ್ಳುತ್ತಿರುವುದು ಕಾಣುತ್ತೆವೆ. ಆದರೆ ಅದರ ಹಿಂದೆ ಅಡಗಿರುವ ವಿಶೇಷತೆ ಅರಿಯುವ ಪ್ರಯತ್ನ ಆಗಬೇಕಿದೆ ಒಮ್ಮೆ ಅದರ ಬಗ್ಗೆ ನನ್ನಲ್ಲಿರುವ ಕೊಂಚ ಮಾಹಿತಿ ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಸಂಪ್ರದಾಯಗಳ ಬೀಡಾಗಿರುವ ನಮ್ಮ ದೇಶದಲ್ಲಿ ಹಿಂದೂಗಳಿಗಂತೂ ಪ್ರತಿ ತಿಂಗಳಿಗೆ ಒಂದೊಂದು ವಿಶೇಷತೆಗಳನ್ನು ತಿಳಿಸುವ ಹಬ್ಬದ ಸಂಭ್ರಮಗಳಿರುತ್ತವೆ.ಅದರಂತೆ ಕ್ಯಾಲೆಂಡರ್ ವರ್ಷದ ಮೊದಲ ತಿಂಗಳಲ್ಲಿ ಸಂಕ್ರಾಂತಿ ಹಬ್ಬವು ಆಗಮಿಸುತ್ತದೆ.

ವೈಜ್ಞಾನಿಕವಾಗಿ ಇದು ಪ್ರಕೃತಿಯ ಜೊತೆಗೆ ಸೂರ್ಯನ ಚಲನೆಯ ದಿಕ್ಕು ಬದಲಾಗುವ ಕ್ಷಣವಾಗಿದೆ.ಬೇಸಿಗೆಯಲ್ಲಿ ಹಗಲು ಹೆಚ್ಚು, ರಾತ್ರಿ ಕಡಿಮೆ. ಚಳಿಗಾಲದಲ್ಲಿ ಹಗಲು ಕಡಿಮೆ, ರಾತ್ರಿ ಹೆಚ್ಚು. ಹೀಗೆ ಸೂರ್ಯನು ವರ್ಷಕ್ಕೆ ಎರಡು ದಿನ ತನ್ನ ಪಥವನ್ನು ಬದಲಾವಣೆ ಮಾಡುತ್ತಾನೆ ಎಂಬ ವಾಡಿಕೆ ಇರುವುದನ್ನು ನಮ್ಮ ಹಿರಿಯರಿಂದ ಕೇಳುದನ್ನು ಕಾಣುತ್ತೆವೆ.

ಇನ್ನೂ ಹಳ್ಳಿಗಳಲ್ಲಿ ಈ ಸಮಯವು ಪೈರನ್ನು ಕಟಾವು ಮಾಡಿ ಅವುಗಳನ್ನು ಚೀಲಗಳಲ್ಲಿ ತುಂಬುವ ಸುಗ್ಗಿಯ ಸಂಭ್ರಮವಾಗಿರುತ್ತದೆ.

ಪ್ರತಿ ಸ್ಥಳ ಸ್ಥಳಕ್ಕೂ ಸಾಗಿದಂತೆ ಅಲ್ಲಲ್ಲಿನ ವಿಶೇಷತೆಗೆ ಅನುಗುಣವಾಗಿ ಈ ಹಬ್ಬವನ್ನು ವಿಶೇಷವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ ಎನ್ನುವುದು ಕೂಡ ನಮ್ಮ ಹಿರಿಯರು ತಿಳಿಸಿದ ಮಾಹಿತಿ. ಕರ್ನಾಟಕದಲ್ಲಿ ಇದನ್ನು ಮಕರ ಸಂಕ್ರಾಂತಿ ಹಬ್ಬ ಎಂದು ಕರೆಯುತ್ತಾರೆ.ಈ ದಿನದಂದು ಎಲ್ಲಾ ಮನೆಯಂಗಳಲ್ಲಿ ರಂಗೋಲಿ ಹಾಕಿ, ಸರಸರನೇ ದೇವರ ಪೂಜೆಗೆ ತಯಾರಿಕೆ ಮಾಡುತ್ತ ಗದ್ದೆಗಳಲ್ಲಿ ನಿಂತಿರುವ ಪೈರಿಗೆ ಪೂಜೆಗೆ ಸಿದ್ಧತೆ ಮಾಡಿ,ನಿಂತ ಪೈರಿಗೆ ಪೂಜೆ ಸಲ್ಲಿಸಿ ಅದನ್ನು ಕಟಾವು ಮಾಡಲಾಗುತ್ತದೆ.ಈ ಹಬ್ಬಕ್ಕೆಂದೇ ಹಲವಾರು ಬಗೆ ಬಗೆಯ ಚಟ್ನಿಗಳನ್ನು ತಯಾರಿಸಲಾಗುತ್ತದೆ. ಸಜ್ಜಿ ರೊಟ್ಟಿ ಮಾಡುವುದು,ಗಟ್ಟಿ ಕೆನೆಭರಿತ ಮೋಸರಿನೊಂದಿಗೆ ಗುರೆಳ್ಳು ಚಟ್ನಿ ಜೊತೆಗೆ ಗದ್ದೆಗಳಲ್ಲಿ ಕುಟುಂಬದ ಸದಸ್ಯರು ಹಾಗೂ ಬಳಗದವರೊಂದಿಗೆ ಊಟದ ಸವಿಯು ಎಲ್ಲರ ಮನ ತಣಿಸುತ್ತದೆ. ಅದರೊಟ್ಟಿಗೆ ಊಟದ ನಂತರ ಎಳ್ಳು ಮತ್ತು ಬೆಲ್ಲವನ್ನು ಬೆರೆಸಿ ಎಲ್ಲರಿಗೂ ಹಂಚಿ ಸಂಭ್ರಮಿಸಲಾಗುತ್ತದೆ.ಇನ್ನು ಚಿಕ್ಕ ಮಕ್ಕಳಂತೂ ಹೊಸ ಹೊಸ ಉಡುಪುಗಳನ್ನು ತೊಟ್ಟು ಹಳ್ಳಿಯಲ್ಲಿರುವ ತಮ್ಮ ಗೆಳೆಯರ ಮನೆಗಳಿಗೆ ಸಂಕ್ರಾಂತಿ ಕಾಳುಗಳನ್ನು ವಿನಿಮಯ ಮಾಡಿಕೊಳ್ಳುವ ಕ್ಷಣಗಳಂತೂ ಹೊಸ ಲೋಕವನ್ನೇ ನಿರ್ಮಿಸುತ್ತದೆ ಎನ್ನುವುದು ಒಂದು ಅವಿಸ್ಮರಣೀಯವಾಗಿರುತ್ತದೆ. ಕೇರಳದಲ್ಲಿನ ಶಬರಿಮಲೆಯಲ್ಲಿರುವ ಅಯ್ಯಪ್ಪನ ಭಕ್ತಿಯಲ್ಲಿ ಅಲ್ಲಲ್ಲಿ ಇರುವ ಜನರೆಲ್ಲಾ 3 ತಿಂಗಳು ಕಠಿಣ ವ್ರತವನ್ನು ಮಾಡಿ ಮಡಿ ಹುಡಿಯಲ್ಲಿ ಅಯ್ಯಪ್ಪನ ದರ್ಶನ ಪಡೆಯಲು ಮಕರ ಸಂಕ್ರಾಂತಿಯಂದು ಹೋಗುತ್ತಾರೆ. ಅಲ್ಲಿನ ಬೆಟ್ಟಗುಡ್ಡಗಳ ಮಧ್ಯದಲ್ಲಿ ಮಕರ ಜ್ಯೋತಿಯು ಮೂರು ಬಾರಿ ದರ್ಶನ ನೀಡುತ್ತದೆ ಎನ್ನುವುದು ಭಕ್ತರ ನಂಬಿಕೆ.



ಇನ್ನು ತಮಿಳುನಾಡಿನಲ್ಲಿ ಇದನ್ನು ಪೊಂಗಲ್ ಎಂದು ಕರೆಯುತ್ತಾರೆ.ಈ ಸಂದರ್ಭದಲ್ಲಿ ಜಲ್ಲಿಕಟ್ಟು ಎನ್ನುವ ವಿಶೇಷ ಹೋರಿ ಹಿಡಿಯುವ ಸ್ಪರ್ಧೆಯನ್ನು ಆಚರಿಸಲಾಗುತ್ತದೆ. ಹಾಗೂ ಅಲ್ಲಲ್ಲಿ ದನಕರುಗಳ ಶೃಂಗಾರ ಮಾಡಿ ಅವುಗಳ

ಮೆರವಣಿಗೆ ಕೂಡ ನಡೆಯುತ್ತದೆ. ಪಂಜಾಬ್ ಮತ್ತು ಹರಿಯಾಣದಲ್ಲಿ ಲೋಹರಿ ಎಂದು ಈ ಹಬ್ಬವನ್ನು ಆಚರಿಸುತ್ತಾರೆ.

ಒಟ್ಟಾರೆಯಾಗಿ ಈ ಹಬ್ಬವನ್ನು ಆಯಾ ಪ್ರದೇಶಗಳಿಗೆ ಅನುಗುಣವಾಗಿ, ಅಲ್ಲಿನ ಜನರು ಹಬ್ಬವನ್ನು ಅತ್ಯಂತ ವಿಜ್ರಂಭಣೆಯಿಂದ ಆಚರಿಸುತ್ತಾರೆ.

ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು ಕೋರುತ್ತ, ಈ ವರ್ಷದ ಆದಿಯಲ್ಲಿ ಹಳೆಯ ಕಷ್ಟಗಳೆಲ್ಲವೂ ದೂರವಾಗಿ ಹೊಸ ಆಶಾಕಿರಣ ಎಲ್ಲರ ಬಾಳಲ್ಲೂ ಬೆಳಗಲಿ, ಸುಖ ಶಾಂತಿ ತರಲೆಂದು ಹಾರೈಸುತ್ತೇನೆ.

ಮಕ್ಕಳಿಗೆ ನಮ್ಮ ಸಂಪ್ರದಾಯದ ಬಗ್ಗೆ ನಮ್ಮಲ್ಲಿರುವ ಅರಿವನ್ನು ಮೂಡಿಸಿದರೆ ಅವರು ಆಚರಣೆ ಮಾಡುವ ಹಬ್ಬದಲ್ಲಿ ವಿಶೇಷತೆ ಕಾಣಬಹುದು ಎನ್ನುವ ಆಶಯ ನನ್ನದು. ನೀವೇನಂತೀರಿ...

। ಆನಂದ ಜಿ.ಎನ್.
ದಾಂಡೇಲಿ.(ಉ.ಕ.)

ಸಂಕ್ರಾಂತಿಯ ಹಾಲುಬಾಯಿ

ನಾನು ಚಿಕ್ಕವಳಿದ್ದಾಗೆ ಸಂಕ್ರಾಂತಿ ಹಬ್ಬಕ್ಕೆ ನನ್ನ ಸೋದರತ್ತೆ ಮನೆ ಕಡೆಯಿಂದ ಆಹ್ವಾನ ಬರುತಿತ್ತು. ಅತ್ತೆ ಮನೆ ತಲುಪಿದಾಗ ಅಲ್ಲಿ ಉಳಿದ ಬಂಧುಗಳೆಲ್ಲಾ ಆಗಲೇ ಬಂದು ಜಮಾಯಿಸಿಕೊಂಡು ಬಿಟ್ಟಿದ್ದರು. ಅವರೆಲ್ಲಾ ತಂದಿರುವ ಸಿಹಿ ತಿಂಡಿಗಳ ಪ್ಯಾಕೆಟ್ಗಳನ್ನು ಅತ್ತೆ ಓಪನ್ ಮಾಡುತ್ತಿದ್ದರು. ನಮ್ಮ ಮನೆಯಿಂದ ಕೊಂಡೋದ ಬ್ಯಾಗನ್ನು ಬಿಚ್ಚಿ ಎಲ್ಲರ ಮುಂದೆ ಅಮ್ಮ ಹರಡಿದರು. ಬರೀ ಸಿಹಿ ತಿಂಡಿಗಳ ಮೇಳವೋ ಎಂಬಂತೆ ಅವುಗಳೇ ರಾರಾಜಿಸುತ್ತಿದ್ದವು. ಇದರ ಮಧ್ಯೆ ಅಡುಗೆ ಮನೆಯಿಂದ ಕಾಫಿಯ ಸುವಾಸನೆ ಸುತ್ತೆಲ್ಲಾ ಘಮ್ಮೆಂದಿತು. ಅತ್ತೆಗೆ ಸಂಭ್ರಮವೋ ಸಂಭ್ರಮ. ಕಾಫಿ ವಿತರಿಸುವಾಗ ಕೊಟ್ಟವರಿಗೇ ಮತ್ತೆ ಮತ್ತೆ ತಂದು ಕೊಡುತ್ತಿದ್ದರು. ಕೊಂಚ ಮರೆವಿನ ಸ್ವಭಾವದವರು ಕೂಡ. ?ಹಬ್ಬದ ಅಡುಗೆ ಸಿದ್ಧವಾಗುತ್ತಿದೆ. ಯಾವ ಸಿಹಿ ಭಕ್ಷ ನೀವುಗಳು ಇಷ್ಟಪಡುತ್ತೀರಾ? ಹೋಳಿಗೆ, ಕಜ್ಜಾಯ ಏನಾದರೂ ಮಾಡಲೇ?? ಅತ್ತೆ ಕೇಳಿದರು. ಎಲ್ಲರೂ ?ಏನೂ ಸಿಹಿ ತಿಂಡಿ ಮಾಡುವ ತೊಂದರೆ ತೆಗೆದುಕೊಳ್ಳಬೇಡಿ. ಅಷ್ಟೊಂದು ವೆರೈಟಿ ಸಿಹಿ ತಿಂಡಿಗಳು ಮೇಳೈಸಿವೆ, ಅವನ್ನೆಲ್ಲಾ ವಿಚಾರಿಸಿಕೊಳ್ಳಬೇಡವೆ?? ಎನ್ನುತ್ತ ಒಕ್ಕೊರಲಿನಿಂದ ಅತ್ತೆಯ ಹುಮ್ಮಸ್ಸಿಗೆ ತಣ್ಣೀರೆರೆಚಿದರು. ಹೌದು, ಅವರುಗಳು ಹೇಳುತ್ತಿರುವುದು ಸರಿಯಾಗಿಯೇ ಇದೆ; ಈಗ ತಂದಿರುವ ಸಿಹಿಗಳನ್ನಲ್ಲಾ ಬೆರಸಿ ಮಿಕ್ಷಿ ಮಾಡಿದ್ರೆ ಅದೊಂದು ಹೊಸ ಸಿಹಿಯಾಗಿ ಬಿಡುತ್ತದೆ ಅಂತ ಅತ್ತೆ ಮಗ ಕಿಸ್ಸಕ್ಕಂತ ನಕ್ಕ. ಅಷ್ಟರಲ್ಲಿ ಮಾವ ಬರೀ ಹಾಲುಬಾಯಿ ಮಾಡು ಸಾಕು, ಈ ಊಟದಲ್ಲಿ ಹೊರಗಡೆಯಿಂದ ತಂದಿರುವ ಸ್ವೀಟ್ಸ್ ಅಷ್ಟು ಹಿತವಾಗಿರುವುದಿಲ್ಲ ಏನಿದ್ದರೂ ಹಾಲುಬಾಯಿ ಸಮಾನ ಮತ್ತೊಂದು ಸಿಹಿ ಇರುವುದಿಲ್ಲ ಎಂದರು. ಅವರು ಆಡುವ ಮಾತಿಗೆ ಮನೆಯಲ್ಲಿ ಎದುರಿಲ್ಲ. ಪೂಜೆ ಮುಗಿದು ಎಳ್ಳು ಬೆಲ್ಲ ಪ್ರಸಾದಗಳ ವಿನಿಯೋಗ ಆದ ನಂತರ ಊಟಕ್ಕೆ ಸಿದ್ಧತೆ ನಡೆಯಿತು. ಬಾಳೆ ಎಲೆಗಳಲ್ಲಿ ಸುತ್ತಲೂ ಬಿಸಿಬಿಸಿಯಾಗಿ ಮಾಡಿರುವ ಪಲ್ಯ, ಕೋಸಂಬರಿ, ಪುಳಿಯೋಗರೆ, ಗೊಜ್ಜು, ಇತ್ಯಾದಿಗಳದೇ ಸಂತೆ. ಎಲ್ಲರೂ ಊಟಕ್ಕೆ ಕುಳಿತೆವು. ನಾವೆಲ್ಲಾ ಕದ್ದು ಕದ್ದು ಹಾಲುಬಾಯಿ ರುಚಿ ನೋಡುತ್ತಿದ್ದೆವು. ಅಷ್ಟ್ಲಲ್ಲಿ ನಾವೆಲ್ಲಾ ಅತ್ತೆ ಹಾಲುಬಾಯಿ ಸಪ್ಪೆ ಎಂದೆವು. ಮರವೆಯ ಅತ್ತೆಗೆ ಜ್ಞಾನೋದಯವಾಯಿತು. ತಾವು ಬೆಲ್ಲದ ಪಾಕವನ್ನು ಇಟ್ಟಿದ್ದು ಹಾಲುಬಾಯಿ ಮಾಡುವಾಗ ಹಾಕೋಣವೆಂದು ಅಂದುಕೊಂಡಿದ್ದರು ಏನೋ ಗಡಿಬಿಡಿ, ಸಂಭ್ರಮದ ಭರಾಟೆಯಲ್ಲಿ ಅದು ಕಣ್ಣಿಗೆ ಬೀಳದೆ ವಂಚಿತವಾಯಿತು. ತುಂಬಾ ನೊಂದುಕೊಂಡರು ಎಲ್ಲರೂ ನಿಧಾನವಾಗಿ ಊಟ ಮಾಡಿ. ಇನ್ನು ಎರಡು ನಿಮಿಷಗಳಲ್ಲಿ ಹಾಲುಬಾಯಿ ಸಿದ್ಧವಾಗಿಬಿಡುತ್ತದೆ ಎಂದು ಹೇಳಿ ಸಂಭಾಳಿಸಿಕೊಂಡರು. ಈಗ ಇಲ್ಲಿ ಜಮಾಯಿಸಿರುವ ಸ್ವೀಟ್ಗಳ ಕೂಟವೇ ಬೇಜಾನ್ ಆಗಿವೆ, ಈಗ ನಿನ್ನ ಹಾಲುಬಾಯಿ ಯಾರಿಗೆ ಬೇಕೇ? ಮಾವ ನುಡಿದರು. ಊಟದ ಮಧ್ಯೆ ನಗೆಯ ಸಂಭ್ರಮ ಮನೆ ಮಾಡಿತು. ಪ್ರತಿ ಸಂಕ್ರಾಂತಿ ಬಂದಾಗ ಈ ನೆನಪು ಕಾಡುತ್ತದೆ. ಮಾಡಿಟ್ಟ ಹಾಲುಬಾಯಿ ಹಾಗೆಯೇ ಉಳಿದಿತ್ತು!

। ಪುಷ್ಪ ಪ್ರಸಾದ್

ಮಕರ ಸಂಕ್ರಾಂತಿಯ ಮಹತ್ವ

ಕೃಷಿಕರಿಗೆ ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿ.ಲೋಹ್ರಿ ಎಂದು ಸಂಕ್ರಾಂತಿ ಹಬ್ಬವನ್ನು ಕೆಲವರು ಅಂದರೆ ಪೊಂಗಲ್ ಎಂದು ತಮಿಳುನಾಡಿನಲ್ಲಿ ,ಕರ್ನಾಟಕದಲ್ಲಿ ಮಕರಸಂಕ್ರಾಂತಿಯೆಂದು ಕರೆಯುತ್ತಾರೆ.ನಮ್ಮ ಭಾರತ ದೇಶದ ಬೆನ್ನೆಲಬು ರೈತ.ಕೃಷಿಕರ ನಾಡು ನಮ್ಮದು.ಕೆಲವಾರು ತಿಂಗಳ ಶ್ರಮದಿಂದ ಬೆಳೆದ ಫಲ ಮನೆಗೆ ಬಂದಾಗ ಆಗ ಎದುರಾಗುವ ಸಂತೋಷವನ್ನು ಸಂಭ್ರಮಿಸುವ ಹಬ್ಬವೇ ಮಕರ ಸಂಕ್ರಾಂತಿ.ಸಂಕ್ರಾಂತಿಯ ಸಮಯದಲ್ಲಿ ಬೆಳೆದು ಬಂದ ಎಳ್ಳು,ಬೆಲ್ಲವನ್ನು ದೇವರಿಗೆ ನೇವೇದ್ಯ ಮಾಡಿ ಮನೆಮಂದಿಯೆಲ್ಲ ಸವಿದು ಬಳಗ ಬಾಂಧವರಿಗೆಲ್ಲ ಬೀರಿ ಸಂತಸ ಪಡುವದು ಒಂದು ವಿಶೇಷ.'ಎಳ್ಳು ಬೆಲ್ಲ ತೆಗೆದುಕೊಂಡು ಒಳ್ಳೆಯ ಮಾತನಾಡೋಣ' ಎನ್ನುವ ವಿಶೇಷತೆ ಸಂಕ್ರಾಂತಿ ಹಬ್ಬದ ವಿಶೇಷತೆಯಾಗಿದೆ.

ಎಳ್ಳು ಬೆಲ್ಲದ ಮಹತ್ವ

ಎಳ್ಳುಬೆಲ್ಲ ಸೇವಿಸುವದರ ಹಿಂದೆ ವೈಜ್ಞಾನಿಕ ಕಾರಣವಿದೆ.ಈ ಸಮಯದಲ್ಲಿ ಚಳಿಗಾಲವಾಗಿದ್ದು ನಮ್ಮ ದೇಹ ಹೆಚ್ಚಿನ ಬಿಸಿ ಉತ್ಪಾದಿಸಿ ದೇಹವನ್ನು ಬೆಚ್ಚಗಿಡಬೇಕಾಗುತ್ತದೆ.ಇದಕ್ಕೆ ಶಕ್ತಿಯ ಬಳಕೆ ಬೇಕು.ಆ ಶಕ್ತಿಯ ಬಳಕೆ ನೀಡುವದು ಎಳ್ಳು ಬೆಲ್ಲ. ಇವರಡೂ ಒದಗಿಸುವ ಬೇರಾವುದೇ ಸಾಮಗ್ರಿ ಶಕ್ತಿ ಮತ್ತು ಬಿಸಿಯನ್ನು ಒದಗಿಸಲಾರದು. ಎಳ್ಳಿನಲ್ಲಿ ಎಣ್ಣೆಯ ಅಂಶ ಸಮೃದ್ಧವಾಗಿದ್ದು ಇದರಲ್ಲಿ ಪ್ರೊಟೀನ್, ಕಾಲ್ಸಿಯಮ್,ಬಿಕಾಂಪ್ಲೆಕ್ಸ,ಕಾರ್ಬೋಹೈಡ್ರೇಟ ಇವೆ.ಇವೆಲ್ಲವೂ ಮನುಷ್ಯನ ದೇಹಕ್ಕೆ ಶಕ್ತಿ ಒದಗಿಸುತ್ತವೆ. ಇವೆರಡೂ ಪದಾರ್ಥಗಳಿಂದ ದೇಹ ಬೆಚ್ಚಗಾಗಿ ಆರೋಗ್ಯ ಕಾಪಾಡಲು ಸಾಧ್ಯವಾಗುತ್ತದೆ.

ಇದೇ ಕಾರಣಕ್ಕೆ ಎಳ್ಳುಬೆಲ್ಲದ ಬೀರುವಿಕೆ ,ಉಪಯೋಗ ಮಕರಸಂಕ್ರಾಂತಿಯ ವಿಶೇಷವಾಗಿದೆ. ಇವೆರಡರ ಸೇವನೆಯಿಂದ ಅಧಿಕ ರಕ್ತದೊತ್ತಡ ನಿಯಂತ್ರಣದಲ್ಲಿರುವದಲ್ಲದೇ ಮೂಳೆಗಳು ಗಟ್ಟಿಗೊಳ್ಳುತ್ತವೆ.ಜೀರ್ಣಾಂಗಗಳ ಕಾರ್ಯನಿರ್ವಹಣೆ ಉತ್ತಮವಾಗಿರುತ್ತದೆ.ಚಳಿಗೆ ಕಂಡುಬರುವ ಮೂಳೆ,ಸಂದುಗಳ ನೋವು ಕಡಿಮೆಯಾಗುತ್ತದೆ.

ಬೆಲ್ಲ ಸೇವನೆಯಿಂದ ಜೀರ್ಣಕ್ರಿಯೆ ಉತ್ತಮಗೊಳ್ಳುವದಲ್ಲದೇ ದೇಹದ ಕೊಳೆ ಹೊರಹಾಕಲು ಸಹಾಯ ಮಾಡುತ್ತದೆ.ಇಂತಹ ಆರೋಗ್ಯ ಅಂಶಗಳನ್ನೊಳಗೊಂಡ ಎಳ್ಳು ಬೆಲ್ಲ ಸೇವಿಸಿ ನಾಡಿನ ಜನತೆಗೆಲ್ಲ ಬೀರಿ 2026ರ ಶುಭಾಗಮನದಲ್ಲಿ ಮಕರ ಸಂಕ್ರಾಂತಿಯ ಶುಭಾಶಯಗಳನ್ನು ನಾಡಿನಾದ್ಯಂತ ಜನರಿಗೆ ತಿಳಿಸಿ ಆರೋಗ್ಯವಂತರಾಗಿ ಬಾಳೋಣ.

ಸರ್ವೇ ಜನ ಸುಖಿನೋ ಭವಂತು.

। ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,